ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಆಗಸ್ಟ್ 26, 2020

ಸಂಪುಟ : 47 ಸಂಚಿಕೆ : 106 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

# ಕೊರೊನಾ : ಶವ ನೋಡಲೂ ಲಂಚ

## ಕೋವಿಡ್ ನಿಂದ ಮೃತಪಟ್ಟವರ ಶವಕ್ಕೆ ಜಿಲ್ಲಾಸ್ಪತ್ರೆ ಶವಾಗಾರದಲ್ಲಿ 20 ಸಾವಿರ ಡಿಮ್ಯಾಂಡ್



**ಜಿ.ಪಂ. ಸಾಮಾನ್ಯ ಸಭೆಯಲ್ಲಿ ಸದಸ್ಯ ಕೆ.ಎಸ್. ಬಸವಂತಪ್ಪ ಗುರುತರ ಆರೋಪ**

ದಾವಣಗೆರೆ, ಆ. 25- ಕೊರೊನಾ ಪಾಸಿಟಿವ್ ಬಂದು ಮೃತಪಟ್ಟ ಶವದ ಮುಖ ತೋರಿಸಲು ಹಾಗೂ ಶವ ನೀಡಲು ಸಂಬಂಧಿಕರಿಂದ ಜಿಲ್ಲಾಸ್ಪತ್ರೆಯಲ್ಲಿ 20 ಸಾವಿರ ರೂ. ವಸೂಲಿ ಮಾಡಲಾಗುತ್ತಿದೆ ಎಂದು ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ ಸಾಮಾನ್ಯ ಸಭೆ ಯಲ್ಲಿಂದು ಆರೋಪಿಸಿದರು.

ಮೃತಪಟ್ಟ ಸಂಬಂಧಿಕರು ಕೊನೆಯ ಬಾರಿಯಾದರೂ ಸತ್ತವರ ಮುಖ ನೋಡ ಬೇಕೆಂದು ಹಂಬಲಿಸುತ್ತಾರೆ. ಈ ವೇಳೆ ಕೊರೊನಾ ಬಂದು ಮೃತ ಪಟ್ಟವರ ಮುಖ ತೋರಿಸುವು ದಿಲ್ಲ ಎಂದು ಶವಾಗಾರದಲ್ಲಿ ಹೇಳಿ ಕಳುಹಿಸುತ್ತಾರೆ. ಆದರೆ 20 ಸಾವಿರ ರೂ. ಕೊಟ್ಟರೆ ಮುಖ ತೋರಿಸುವುದಷ್ಟೇ ಅಲ್ಲ, ನೀವು ಕೇಳಿದ ಸ್ಥಳಕ್ಕೆ ಶವ ಕಳುಹಿಸಿ ಕೊಡುತ್ತೇವೆ ಎಂದು ಹೇಳಲಾಗುತ್ತಿದೆ.

ಯಾವ ಅಧಿಕಾರಿಗಳು ಜಿಲ್ಲಾಸ್ಪತ್ರೆಯ ಶವಾಗಾರದಲ್ಲಿ ಏನು ನಡೆಯುತ್ತಿದೆ ಎಂದು ಇದುವರೆಗೂ ಹೋಗಿ ನೋಡಿಲ್ಲ. ಬಡ ಜನರಿಂದ ಕೊರೊನಾ ಹೆಸರೇಳಿ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಬಸವಂತಪ್ಪ ಕಿಡಿಕಾರಿದರು.

**ಒಂದೇ ರುದ್ರಭೂಮಿ:** ಜಿಲ್ಲೆಯ ಯಾವ ಊರಿನ ವ್ಯಕ್ತಿ ಪಾಸಿಟಿವ್ ಬಂದು ಸತ್ತರೂ ಶ್ರೀರಾಮ ನಗರದ ಬಳಿಯ ರುದ್ರಭೂಮಿ ಯಲ್ಲಿ ಶವಸಂಸ್ಕಾರ ಮಾಡಲಾಗುತ್ತದೆ. ಆಯಾ ತಾಲ್ಲೂಕು ವ್ಯಾಪ್ತಿಗಳಲ್ಲೂ ಶವ ಸಂಸ್ಕಾರಕ್ಕೆ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಬಸವಂತಪ್ಪ ಒತ್ತಾಯಿಸಿದರು.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ರೇಣುಕಾರಾಧ್ಯ ಮಾತನಾಡುತ್ತಾ, ಪ್ರಸ್ತುತ ಇರುವ ಆಕ್ಸಿಜನ್ (2ನೇ ಪುಟಕ್ಕೆ)

### ಜಿಲ್ಲಾಸ್ಪತ್ರೇಲಿ ಬೆಡ್ ಖಾಲಿ ಇರಲ್ಲ ಖಾಸಗಿ ಆಸ್ಪತ್ರೇಲಿ ಚಿಕಿತ್ಸೆ ಕೊಡಲ್ಲ

ಜಿಲ್ಲಾ ಚಿಗಟೇರಿ ಆಸ್ಪತ್ರೆ ಮುಂಭಾಗ ತಾಸು ಗಟ್ಟಲೆ ಕುಳಿತರೂ ಬೆಡ್ ಸಿಗುತ್ತಿಲ್ಲ. ಖಾಸಗಿ ಆಸ್ಪತ್ರೆಗಳಲ್ಲೂ ನಾನ್ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ನಿರಾಕರಿಸಲಾಗುತ್ತಿದೆ. ಇದರಿಂದಾಗಿ ಕೋವಿಡ್ ಇರದಿದ್ದರೂ ಸಣ್ಣ ಪುಟ್ಟ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ಸಿಗದೆ ಜನರು



ಸಾವನ್ನಪ್ಪುತ್ತಿದ್ದಾರೆ ಎಂದು ಸಾಮಾನ್ಯ ಸಭೆಯ ಆರಂಭದಲ್ಲಿಯೇ ಕೊರೊನಾ ಹಾಗೂ ಕೊರೊನೇತರ ರೋಗಿಗಳಿಗೆ ಚಿಕಿತ್ಸೆ ನೀಡುವ ಕ್ರಮಗಳ ಬಗ್ಗೆ ಸದಸ್ಯ ಕೆ.ಎಸ್. ಬಸವಂತಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸದಸ್ಯ ವಿಶ್ವನಾಥ್ ಸಹ ಗ್ರಾಮೀಣ ಪ್ರದೇಶದಲ್ಲಿನ ಸರ್ಕಾರಿ ಆಸ್ಪತ್ರೆಗಳು ಹೆಚ್ಚಾಗಿ ಕೊರೊನಾ ಚಿಕಿತ್ಸೆಗೆ ಸೀಮಿತವಾಗಿವೆ. ಶೀತ, ಜ್ವರ ಬಂದರೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುತ್ತಿಲ್ಲ. ಇದರಿಂದ ಹಳ್ಳಿ ಜನರು ಪರದಾಡುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ರಚನೆಯಾಗದ ತಂಡ:** ಜಿಲ್ಲಾ ಉಸ್ತುವಾರಿ ಸಚಿವರು ಇತ್ತೀಚೆಗೆ ಸದಸ್ಯರೊಂದಿಗೆ ಸಭೆ ನಡೆಸಿದ ನಂತರ ಖಾಸಗಿ (3ನೇ ಪುಟಕ್ಕೆ)

### ರಾಜಕೀಯದತ್ತ ಕೊರೊನಾ ಚರ್ಚೆ: ಮಾತಿನ ಚಕಮಕಿ

ಜಿ.ಪಂ. ಸಾಮಾನ್ಯ ಸಭೆಯಲ್ಲಿ ನಡೆದ ಕೊರೊನಾ ಚರ್ಚೆ ರಾಜಕೀಯ ತಿರುವುದು ಪಡೆದು ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ಏರುಗತಿಯ ಮಾತಿನ ಚಕಮಕಿಗೆ ಕಾರಣವಾಯಿತು.

ಸದಸ್ಯ ಬಸವಂತಪ್ಪ ಕೊರೊನಾ ನಿಯಂತ್ರಣದಲ್ಲಿ ಜಿಲ್ಲಾಡಳಿತ ಹಾಗೂ ಸರ್ಕಾರ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು ಎಂದರು. ಆಗ ಬಿಜೆಪಿ ಸದಸ್ಯ ವಾಗೀಶ ಸ್ವಾಮಿ ಹಾಗೂ ಮಹೇಶ್ ಸರ್ಕಾರ ಹಾಗೂ ಅಧಿಕಾರಿಗಳ ಪರ ಮಾತನಾಡಿದರು.

ಅಧಿಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, 70 ವರ್ಷಗಳ ವ್ಯವಸ್ಥೆಯನ್ನು ತಕ್ಷಣ ಬದಲಿಸಲಾಗದು ಎಂದು ಮಹೇಶ್ ಹೇಳಿದರು. ಚರ್ಚೆ ರಾಜಕೀಯ ತಿರುವು ಪಡೆದು ವಾಗ್ಯುದ್ಧಕ್ಕೆ ಕಾರಣವಾಯಿತು. ಮಾತಿನ ಚಕಮಕಿ ತಾರಕಕ್ಕೇರಿದಾಗ ಅಧ್ಯಕ್ಷೆ ದೀಪಾ ಜಗದೀಶ್, ಪಕ್ಷಗಳ ಬಗ್ಗೆ ಮಾತನಾಡು ವುದಾದರೆ ಸಭೆಯ ಹೊರಗಡೆ ಚರ್ಚಿಸಿ, ಈಗ ಸಮಸ್ಯೆಗಳ ಕುರಿತು ಮಾತನಾಡಿ ಎಂದು ಸೂಚಿಸಿದರು.

# ಅಪ್ರಾಪ್ತರಲ್ಲೇ ಹೆಚ್ಚು ಸೋಂಕು

## ದೆಹಲಿಯಲ್ಲಿ ಮಕ್ಕಳು ಶಾಲೆಗೆ ಹೋಗದೇ ಮನೆಯಲ್ಲಿದ್ದರೂ ಹಿರಿಯರಿಂದ ಸೋಂಕು

ನವದೆಹಲಿ, ಆ. 25 - ಐದರಿಂದ ಹದಿನೇಳು ವರ್ಷಗಳ ನಡುವಿನ ಅಪ್ರಾಪ್ತರು ದೆಹಲಿಯಲ್ಲಿ ಕೊರೊನಾ ವೈರಸ್ ಸಂಪರ್ಕಕ್ಕೆ ಹೆಚ್ಚಾಗಿ ಬಂದಿದ್ದಾರೆ ಎಂದು ಸೆರೋ ಸಮೀಕ್ಷೆ ವರದಿ ತಿಳಿಸಿದೆ. ಆಗಸ್ಟ್ 1ರಿಂದ 7ರ ನಡುವೆ ಸಮೀಕ್ಷೆ ನಡೆಸಲಾಗಿತ್ತು.

ದೆಹಲಿಯಲ್ಲಿ 15,000 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ದೆಹಲಿಯಲ್ಲಿ ನಡೆಸಲಾದ ಎರಡನೇ ಸಮೀಕ್ಷೆ ಇದಾಗಿದೆ. ಒಟ್ಟಾರೆ ಶೇ.29.1ರಷ್ಟು ಜನರು ವೈರಸ್ ಸೋಂಕಿಗೆ ಗುರಿಯಾಗಿರುವುದಾಗಿ ಸಮೀಕ್ಷೆ ತಿಳಿಸಿತ್ತು.



5ರಿಂದ 17ರ ವಯೋಮಾನವದರಲ್ಲಿ ಕೊರೊನಾ ವೈರಸ್ ಕಂಡು ಬಂದಿರುವ ಪ್ರಮಾಣ ಶೇ.34.7ರಷ್ಟಿದೆ.

50 ವರ್ಷಕ್ಕಿಂತ ಹೆಚ್ಚಿನವರಲ್ಲಿ ಕೊರೊನಾ ಸೋಂಕಿನ ಪ್ರಮಾಣ ಶೇ.31.2ರಷ್ಟಿದೆ. 18ರಿಂದ 50ರ ವಯಸ್ಸಿನವರಲ್ಲಿ ವೈರಸ್ ಪ್ರಮಾಣ ಶೇ.28.5ರಷ್ಟಿದೆ ಎಂದು ಸಮೀಕ್ಷಾ ವರದಿಯಲ್ಲಿ ತಿಳಿಸಲಾಗಿದೆ.

21ರಿಂದ 50ರ ವಯಸ್ಸಿನವರಲ್ಲಿ ಕೊರೊನಾ ಸೋಂಕಿಗೆ ಗುರಿಯಾಗಿರುವವರ ಪ್ರಮಾಣ ಶೇ.61.31ರಷ್ಟಿದೆ ಎಂದು ತಿಳಿಸಲಾಗಿದೆ.

ಮನೆಯಲ್ಲಿರುವ ಹಿರಿಯರು ಹಾಗೂ ಮನೆ ಕೆಲಸದವರ ಸಂಪರ್ಕದಿಂದಾಗಿ ಮಕ್ಕಳಿಗೆ ವೈರಸ್ ತಗುಲಿರಬಹುದು ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

ಚಿಕ್ಕ ಮಕ್ಕಳು ಹಾಗೂ ಯುವಕರನ್ನು ಮನೆಯಲ್ಲಿ ಬಂಧಿಸಿಡುವುದು ಕಷ್ಟ. ಅವರು ಶಾಲೆಗೆ ಹೋಗದಿದ್ದರೂ ಸಹ ಆಡಲು ಹೋಗುತ್ತಾರೆ. ಇಲ್ಲವೇ ಪರೋಕ್ಷವಾಗಿಯೂ ಅವರಿಗೆ ಸೋಂಕು (2ನೇ ಪುಟಕ್ಕೆ)

### 25 ದಿನದಲ್ಲಿ ಶೇ.100 ಕೊರೊನಾ ಚೇತರಿಕೆ

ನವದೆಹಲಿ, ಆ. 25 - ಕಳೆದ 25 ದಿನಗಳಲ್ಲಿ ಕೊರೊನಾ ಸೋಂಕಿನಿಂದ ಚೇತರಿಸಿಕೊಳ್ಳುವವರ ಪ್ರಮಾಣ ಶೇ.100ಕ್ಕೂ ಹೆಚ್ಚಾಗಿದೆ. ಇದುವರೆಗೂ ಒಟ್ಟಾರೆ 24.04 ಲಕ್ಷ ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕೊರೊನಾಗೆ ಸಿಲುಕಿ ಸಾವನ್ನಪ್ಪುವವರ ಪ್ರಮಾಣ ಶೇ.1.84ಕ್ಕೆ ಇಳಿಕೆಯಾಗಿದೆ. ಇದುವರೆಗೂ ಸೋಂಕಿಗೆ ಗುರಿಯಾದ ವರಲ್ಲಿ ಶೇ.75.92ರಷ್ಟು ಜನರು ಚೇತರಿಸಿಕೊಂಡಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಕಳೆದ 24 ಗಂಟೆಗಳಲ್ಲಿ 66,500 ರೋಗಿಗಳು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಸೋಂಕಿತರ ಪ್ರಮಾಣ ಈಗ ಕೇವಲ ಶೇ.22.24ರಷ್ಟಿದೆ ಎಂದು ಸಚಿವಾಲ ಯದ ಪ್ರಕಟಣೆಯಲ್ಲಿ ಹೇಳಲಾಗಿದೆ.

### 318 ಪಾಸಿಟಿವ್ 600 ಬಿಡುಗಡೆ

ದಾವಣಗೆರೆ, ಆ. 25- ಜಿಲ್ಲೆಯಲ್ಲಿ ಮಂಗಳವಾರ 318 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಐವರು ಸಾವನ್ನಪ್ಪಿದ್ದು, 600 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 1731 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನ 126, ಹರಿಹರ 45, ಜಗಳೂರು 11, ಚನ್ನಗಿರಿ 48, ಹೊನ್ನಾಳಿ 71 ಹಾಗೂ ಹೊರ ಜಿಲ್ಲೆಯ 17 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆ ಎಂ.ಸಿ.ಸಿ ಎ ಬ್ಲಾಕ್‌ನ 14ರ ಬಾಲಕಿ, ಐಗೂರಿನ 40ರ ಪುರುಷ, ಆಲೂರಿನ (3ನೇ ಪುಟಕ್ಕೆ)

# ಹಾಂಕಾಂಗ್ ವ್ಯಕ್ತಿಗೆ 2ನೇ ಬಾರಿ ಕೊರೊನಾ

## ರೋಗ ನಿರೋಧಕತೆಯಿಂದ ಹಿಡಿದು ಲಸಿಕೆಯವರೆಗೆ ಹಲವಾರು ಪ್ರಶ್ನೆಗಳನ್ನು ತಂದಿಟ್ಟ ಸೋಂಕು

ಲಂಡನ್, ಆ. 25 – ಏಪ್ರಿಲ್ ತಿಂಗಳಲ್ಲಿ ಕೊರೊನಾ ಸೋಂಕಿಗೆ ಗುರಿಯಾಗಿ ಚೇತರಿಸಿಕೊಂಡ ವ್ಯಕ್ತಿಯಲ್ಲಿ ಮತ್ತೆ ಸೋಂಕು ಕಾಣಿಸಿಕೊಂಡಿದೆ. ಇದೇ ಮೊದಲ ಬಾರಿಗೆ ಈ ರೀತಿಯ ಪ್ರಕರಣ ವನ್ನು ಅಧಿಕೃತವಾಗಿ ದಾಖಲಿಸಲಾಗಿದೆ.

ಈ ತಿಂಗಳು ಯುರೋಪ್‌ನಿಂದ ಹಾಂಕಾಂಗ್‌ಗೆ ಮರಳಿದ್ದ 33 ವರ್ಷದ ವ್ಯಕ್ತಿಯಲ್ಲಿ ಎರಡನೇ ಬಾರಿ ಕೊರೊನಾ ಸೋಂಕು ಬಂದಿರುವುದು ಪತ್ತೆಯಾಗಿದೆ.

ಹಾಂಕಾಂಗ್ ವಿಶ್ವವಿದ್ಯಾನಿಲಯದ ಸಂಶೋಧಕರು ಜಿನೋಮ್ ಅಧ್ಯಯನ ನಡೆಸಿ ಆತನಿಗೆ ಎರಡು ಬೇರೆ ಬೇರೆ ರೂಪಾಂತರಣದ ಕೊರೊನಾ ಸೋಂಕು ಗಳು ಬಂದಿವೆ ಎಂದು ತಿಳಿಸಿದ್ದಾರೆ.

ಟೆಕಿ ಆಗಿರುವ ಈ ವ್ಯಕ್ತಿಗೆ ಮೊದಲ ಬಾರಿಗೆ ಸೋಂಕಿನ ಲಕ್ಷಣ ಕಂಡು ಬಂದಿತ್ತು. ಆದರೆ, ಎರಡನೇ ಬಾರಿ ಯಾವುದೇ ಲಕ್ಷಣ ಕಂಡು ಬಂದಿಲ್ಲ. ಹೀಗಾಗಿ ಎರಡನೇ ಬಾರಿಗೆ ಬಂದಿರುವ ಸೋಂಕು ಲಘು ತೀವ್ರತೆಯದ್ದು ಎಂದು ಸಂಶೋಧಕರು ಹೇಳಿದ್ದಾರೆ.

ಈ ಬೆಳವಣಿಗೆಯಿಂದಾಗಿ ಕೊರೊನಾ ಕುರಿತು (3ನೇ ಪುಟಕ್ಕೆ)

### ಹಾಂಕಾಂಗ್ ಮರು ಸೋಂಕಿನ ಬಗ್ಗೆ ಅತಿಯಾದ ಗಾಬರಿ ಬೇಡ : ಐ.ಸಿ.ಎಂ.ಆರ್.

ನವದೆಹಲಿ, ಆ. 25 – ಹಾಂಕಾಂಗ್ ವ್ಯಕ್ತಿಯಲ್ಲಿ ಎರಡನೇ ಬಾರಿ ಕೊರೊನಾ ಸೋಂಕು ಕಂಡು ಬಂದಿರುವ ಬಗ್ಗೆ ಅತಿಯಾಗಿ ಗಾಬರಿಯಾಗಬೇಕಿಲ್ಲ ಎಂದು ಐ.ಸಿ.ಎಂ.ಆರ್. ಅಭಿಪ್ರಾಯ ಪಟ್ಟಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ (ಐ.ಸಿ.ಎಂ.ಆರ್.) ಪ್ರಧಾನ ನಿರ್ದೇಶಕ ಬಲರಾಮ್ ಭಾರ್ಗವ, ಹಾಂಕಾಂಗ್‌ನಲ್ಲಿ ನಡೆದಿರುವುದು ಒಂಟಿ ಪ್ರಕರಣ. ಹಲವಾರು ಅಂಶಗಳನ್ನು ಆಧರಿಸಿ ರೋಗ ನಿರೋಧಕತೆ ನಿರ್ಧಾರವಾಗುತ್ತದೆ (3ನೇ ಪುಟಕ್ಕೆ)

# ಮೂರು ತಿಂಗಳಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಣೆ: ಸಿಎಂ



ಬೆಂಗಳೂರು, ಆ. 25 - ಕೊರೊನಾ ಕಾರಣದಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಕಷ್ಟಕ್ಕೆ ಸಿಲುಕಿದೆ. ಇಷ್ಟರ ನಡುವೆಯೂ ಸರ್ಕಾರಿ ನೌಕರರಿಗೆ ವೇತನ ನೀಡಿ, ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸಿದ್ದೇವೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಮುಂದಿನ ಎರಡು ಮೂರು ತಿಂಗಳಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿರುವ ಮುಖ್ಯಮಂತ್ರಿಯವರು, ಇದಕ್ಕಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

ಕೊರೊನಾ ಸೋಂಕನ್ನು ತಹಬಂದಿಗೆ ತರುವ ಪ್ರಯತ್ನದ ಜೊತೆಗೆ ನಮ್ಮ ಹಣಕಾಸು ಪರಿಸ್ಥಿತಿ ಸುಧಾರಿಸಲು ಅಧಿಕಾರಿಗಳು (2ನೇ ಪುಟಕ್ಕೆ)

### ಡಿಕೆಶಿಗೆ ಕೊರೊನಾ



ಬೆಂಗಳೂರು, ಆ.25 - ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಕೊರೊನಾ ಸೋಂಕು ದೃಢಪ ಟ್ಟಿದ್ದು, ನಗರದ ಸುಗುಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ದೆಹಲಿ ಪ್ರವಾಸದಿಂದ ಹಿಂತಿರುಗಿದ ನಂತರ ತೀವ್ರ ಬೆನ್ನು ನೋವಿನಿಂದ ಬಳಲುತ್ತಿದ್ದರು. ನಿನ್ನೆ ಜ್ವರ ಕಾಣಿಸಿಕೊಂಡ ನಂತರ ರಾತ್ರಿ ಆಸ್ಪತ್ರೆಗೆ ದಾಖಲಾಗಿ ಪರೀಕ್ಷೆ ಮಾಡಿಸಿದಾಗ ಕೊರೊನಾ ಪಾಸಿಟಿವ್ ವರದಿ ಬಂದಿತು. ತಜ್ಞ ವೈದ್ಯರ ತಂಡ ಶಿವಕುಮಾರ್ ಅವರಿಗೆ ಚಿಕಿತ್ಸೆ ನೀಡುತ್ತಿದ್ದು, ತಾವು ಆರೋಗ್ಯದಿಂದ ಇದ್ದು, ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

### ಅಣ್ಣಾಮಲೈ ಬಿಜೆಪಿಗೆ



ನವದೆಹಲಿ, ಆ. 25 - ಮಾಜಿ ಐಪಿಎಸ್ ಅಧಿಕಾರಿ ಕುಪ್ಪುಸ್ವಾಮಿ ಅಣ್ಣಾಮಲೈ ರಾಜ ಕೀಯಕ್ಕೆ ಧುಮುಕಿದ್ದು, ಬಿ ಜೆಪಿಗೆ ಸೇರ್ಪಡೆಯಾಗಿದ್ದಾರೆ.

ಬಿಜೆಪಿ ರಾಷ್ಟ್ರೀಯ ಕೇಂದ್ರ ಕಚೇರಿಯಲ್ಲಿ ಇಂದು ಬಿಜೆಪಿಗೆ ಸೇರ್ಪಡೆಯಾಗಿರುವ ಅಣ್ಣಾಮಲೈ, ತಮಿಳುನಾಡಿನಲ್ಲಿ ರಾಷ್ಟ್ರೀಯವಾದಿ ಸ್ಫೂರ್ತಿ ತರುವುದಾಗಿ ಹೇಳಿದ್ದಾರೆ.

ಈ ವೇಳೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಹೊಗಳಿರುವ ಅಣ್ಣಾಮಲೈ, ಅವರಲ್ಲಿ ನಿರ್ಭೀತ ಗುಣ, ಜ್ಞಾನ ಹಾಗೂ ಸ್ಫೂರ್ತಿ ತುಂಬುವ ಗುಣಗಳಿವೆ ಎಂದಿದ್ದಾರೆ.

# ಹರಪನಹಳ್ಳಿ ತಾ॥ ಪದವಿ ವಿದ್ಯಾಲಯಗಳು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಗೆ

ಹರಪನಹಳ್ಳಿ, ಆ.25 - ತಾಲ್ಲೂಕಿನ ಪದವಿ ವಿದ್ಯಾಲಯಗಳು ಇನ್ನು ಮುಂದೆ ದಾವಣಗೆರೆ ವಿಶ್ವವಿದ್ಯಾಲಯದಿಂದ ಬೇರ್ಪಟ್ಟು ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರ್ಪಡೆಗೊಂಡಿರುವುದನ್ನು ಭಾರತ ರಾಷ್ಟ್ರೀಯ ವಿದ್ಯಾರ್ಥಿ ಕಾಂಗ್ರೆಸ್ (ಎನ್.ಎಸ್.ಯು.ಐ) ಬಳ್ಳಾರಿ ಜಿಲ್ಲಾ ಘಟಕ ಮತ್ತು ಹರಪನಹಳ್ಳಿ ತಾಲ್ಲೂಕು ಘಟಕ ಸ್ವಾಗತಿಸುತ್ತದೆ ಎಂದು ಎನ್.ಎಸ್.

**ಎನ್.ಎಸ್.ಯು.ಐ ಅಭಿನಂದನೆ**

ಯು.ಐ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ. ಜೀಷಾನ್ ಮತ್ತು ಹರಪನಹಳ್ಳಿ ತಾಲ್ಲೂಕು ಅಧ್ಯಕ್ಷ ಶ್ರೀಕಾಂತ ಯಾದವ ತಿಳಿಸಿದ್ದಾರೆ.

ಹರಪನಹಳ್ಳಿ ಮಾಜಿ ಶಾಸಕ ದಿ.ಎಂ.ಪಿ.ರವೀಂದ್ರ ಅವರ ಕಾಲಾವಧಿ ಯಲ್ಲಿಯೇ ಹರಪನಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆಗೆ ಸೇರ್ಪಟ್ಟು ಕಲಂ 371 (ಜೆ) ವಿಶೇಷ ಸ್ಥಾನಮಾನ ಪಡೆದು ಕೊಂಡಿದ್ದರೂ ಕೂಡ ಹರಪನಹಳ್ಳಿ ತಾಲ್ಲೂಕಿನ ಪದವಿ ವಿದ್ಯಾಲಯಗಳು ದಾವಣಗೆರೆ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಎಂ.ಪಿ.ರವೀಂದ್ರ ಅವರ ಅಕಾಲಿಕ ನಿಧನದ ನಂತರ ಈ ಕುರಿತಾಗಿ ಬಳ್ಳಾರಿ ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡರು ಹಾಗೂ (3ನೇ ಪುಟಕ್ಕೆ)

### ಸೋನಿಯಾಗೆ ಕ್ಷಮೆ ಯಾಚಿಸಿದ ಮೊಯ್ಲಿ

ಬೆಂಗಳೂರು, ಆ. 25 – ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಭಾವನೆಗಳಿಗೆ ನೋವುಂಟು ಮಾಡಿದ್ದರೆ ಅದಕ್ಕಾಗಿ ಕ್ಷಮೆ ಯಾಚಿಸುವುದಾಗಿ ಕಾಂಗ್ರೆಸ್ ಹಿರಿಯ ನಾಯಕ ಎಂ. ವೀರಪ್ಪ ಮೊಯ್ಲಿ ಹೇಳಿದ್ದಾರೆ.

ಸಂಘಟನೆ ಯಲ್ಲಿ ಬದಲಾವಣೆ ತರುವಂತೆ ಸೋನಿಯಾರಿಗೆ ಪತ್ರ ಬರೆದ 23 ನಾಯಕರಲ್ಲಿ ಮೊಯ್ಲಿ ಸಹ ಸೇರಿದ್ದರು. ಆದರೆ, ಪತ್ರ ಬರೆದಿ ರುವುದನ್ನು ಸಮರ್ಥಿಸಿಕೊಂಡಿರುವ ಮೊಯ್ಲಿ, ಪಕ್ಷವನ್ನು ಪುನಶ್ಚೇತನಗೊಳಿಸ ಬೇಕಿದೆ ಹಾಗೂ ಮತ್ತೆ ಕಟ್ಟಬೇಕಿದೆ ಎಂದಿದ್ದಾರೆ. (4ನೇ ಪುಟಕ್ಕೆ)

### ಹೊರರಾಜ್ಯ ಬಸ್ ಸಂಚಾರಕ್ಕೆ ಸಿದ್ಧತೆ



ಬೆಂಗಳೂರು, ಆ.25 - ದೇಶಾ ದ್ಯಂತ ಈಗ ಲಾಕ್‌ಡೌನ್ ಸಡಿಲ ಗೊಳಿಸಿರುವುದರಿಂದ ರಾಜ್ಯದಿಂದ ಇತರೆ ರಾಜ್ಯಗಳಿಗೆ ಅದರಲ್ಲೂ ಮುಖ್ಯವಾಗಿ ಗೋವಾ, ಕೇರಳ, ತಮಿಳುನಾಡು, ಪಾಂಡಿಚೇರಿ, ತೆಲಂಗಾಣ ರಾಜ್ಯಗಳಿಗೆ ಪುನಃ ಬಸ್ ಸಂಚಾರ ಪ್ರಾರಂಭಿಸಲು ನಮ್ಮ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ರಸ್ತೆ ಸಾರಿಗೆ ಸಂಸ್ಥೆಗಳು ಸಜ್ಜಾಗಿವೆ.

ಆದರೆ, ಪಕ್ಕದ ಈ ಎಲ್ಲಾ ರಾಜ್ಯಗಳಿಂದ ಇದಕ್ಕೆ ಹಸಿರು ನಿಶಾನೆ ದೊರೆಯಬೇಕಿದೆ. ತದನಂತರ ಸಾರ್ವಜನಿಕರ ಹಿತದೃಷ್ಟಿಯಿಂದ ಬಸ್ ಸಂಚಾರ ಪ್ರಾರಂಭಿಸಲಾಗುವುದು. ಪರಿಸ್ಥಿತಿ ಸುಧಾರಣೆಗೊಂಡ ನಂತರ ಈಗಾಗಲೇ ಆಂಧ್ರ ಪ್ರದೇಶಕ್ಕೆ ಕರ್ನಾಟಕದಿಂದ ನಮ್ಮ ಸರ್ಕಾರಿ ಸಾರಿಗೆ ಬಸ್‌ಗಳ ಸಂಚಾರವನ್ನು ಪ್ರಾರಂಭಿಸಲಾಗಿದೆ.

॥ ಶ್ರೀ ಶಿವನಾರದಮುನಿ ಪ್ರಸನ್ನ ॥ ॥ ಶ್ರೀ ಮುದ್ನಾಳ್ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಶ್ಯಾಬನೂರು ಗ್ರಾಮದ ವಾಸಿ ಗಿರಿಯಜ್ಜಿ ದಿ. ಸಾವಮ್ಮ ದಿ. ಶ್ರೀ ಮುನಿಯಪ್ಪನವರ ಮಗ
ಶ್ರೀ ಹೆಚ್. ಲಿಂಗರಾಜ್ ಮತ್ತು ಸಹೋದರರು ಹಾಗೂ ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ 19.08.2020ನೇ ಬುಧವಾರ ಬೆಳಿಗ್ಗೆ 7.30ಕ್ಕೆ ನನ್ನ ಧರ್ಮಪತ್ನಿ



**ಶ್ರೀಮತಿ ನಂಜಮ್ಮನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 27.08.2020ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಶ್ಯಾಬನೂರು ಗ್ರಾಮದ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಗಿರಿಯಜ್ಜಿ ಶ್ರೀ ಹೆಚ್. ಲಿಂಗರಾಜ್ ಮತ್ತು ಸಹೋದರರು ಹಾಗೂ ಮಕ್ಕಳು,
ಗಿರಿಯಜ್ಜಿ ವಂಶಸ್ಥರು, ಶ್ಯಾಬನೂರು ಹಾಗೂ ಬಂಧು – ಮಿತ್ರರು. ಮೊ. 98864-42434

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

# ಕೊರೊನಾ : ಜಿಲ್ಲೆಯಲ್ಲಿ 318 ಪಾಸಿಟಿವ್ 600 ಬಿಡುಗಡೆ

**(1ನೇ ಪುಟದಿಂದ)** 43ರ ಪುರುಷ, ಪಿಜೆ ಬಡಾವಣೆ ಕೆನರಾ ಬ್ಯಾಂಕ್‌ನ 30ರ ಪುರುಷ, ಆಂಜನೇಯ ಬಡಾವಣೆಯ 70ರ ವೃದ್ಧ, ಡಿಸಿಎಂ ಟೌನ್‌ಶಿಪ್‌ನ 54ರ ಪುರುಷ, 65ರ ಮಹಿಳೆ, ಎಂಸಿಸಿ ಬಿ ಬ್ಲಾಕ್‌ನ 65ರ ಪುರುಷ, 24ರ ಪುರುಷ, ಎಸ್.ಎಸ್. ಆಸ್ಪತ್ರೆ ಕ್ಯಾಂಪಸ್‌ನ ಎನ್.ಹೆಚ್. ಹಾಸ್ಟೆಲ್‌ನ 26ರ ಪುರುಷ, ಎಸ್.ಎಸ್.ಐ.ಎಂ.ಎಸ್. ಎಸ್ಟಾಬ್ಲಿಷ್ ವಿಭಾಗದ 24ರ ಮಹಿಳೆ, ಬಾಪೂಜಿ ಸ್ಟಾಫ್ ನರ್ಸ್ 36ರ ಮಹಿಳೆ, ನಿಟುವಳ್ಳಿಯ 32ರ ಮಹಿಳೆ.

ವಿದ್ಯಾನಗರ 3ರ ಬಾಲಕ, ಶಾಮನೂರು ರಸ್ತೆ ಬಿಎಸ್‌ಎನ್‌ಎಲ್ ಟವರ್ ಬಳಿಯ 47ರ ಮಹಿಳೆ, ಎಂಸಿಸಿ ಎ ಬ್ಲಾಕ್ 38ರ ಪುರುಷ, ಶಾಮನೂರಿನ 10ರ ಬಾಲಕ, ವೊಡ್ಡಿನಹಳ್ಳಿಯ 32ರ ಮಹಿಳೆ, ವಿವೇಕಾನಂದ ಬಡಾವಣೆಯ 10ರ ಬಾಲಕ, ನಿಟುವಳ್ಳಿಯ 35ರ ಮಹಿಳೆ, ಪಿಜೆ ಬಡಾವಣೆ ಪೊಲೀಸ್ ಕ್ವಾಟ್ರಸ್‌ನ 18ರ ಯುವತಿ, ಗಾಂದಿ ನಗರ 1ನೇ ಮೇನ್‌ನ 40ರ ಪುರುಷ, 66ರ ಪುರುಷ.

ದಾವಣಗೆರೆಯ ದೇವರಾಜ ಅರಸು 'ಸಿ' ಬ್ಲಾಕ್ 6ನೇ ಕ್ರಾಸ್ ನ 42 ರ ಪುರುಷ, 36ರ ಪುರುಷ, ಕುರುಬರ ಕೇರಿ 32 ರ ಪುರುಷ, ಕಾಡಜ್ಜಿ ಗ್ರಾಮದ 78ರ ವೃದ್ಧೆ, ಆಂಜನೇಯ ಬಡಾವಣೆ 14ನೇ ಕ್ರಾಸ್ 61ರ ಪುರುಷ, 21ರ ಪುರುಷ, 73ರ ವೃದ್ಧ, 21ರ ಪುರುಷ, ರಂಗನಾಥ ಬಡಾವಣೆಯ 53ರ ಪುರುಷ, 45ರ ಮಹಿಳೆ, ಸರಸ್ವತಿ ನಗರದ 56ರ ಪುರುಷ, ರಾಮನಗರದ 60 ರ ಮಹಿಳೆ, ವಿದ್ಯಾನಗರದ 19ರ ಯುವಕ, 15ರ ಬಾಲಕ, ಪಿ.ಜೆ.ಬಡಾವಣೆ 30ರ ಪುರುಷ, ಎಂ.ಸಿ.ಸಿ. ಬಿ ಬ್ಲಾಕ್‌ನ 37ರ ಪುರುಷ, ಕುವೆಂಪು ನಗರದ 22ರ ಪುರುಷ, ಎಸ್.ಎಸ್. ಲೇಔಟ್ ನ 53ರ ಪುರುಷ, 40ರ ಪುರುಷ, ಭಗತ್ ಸಿಂಗ್ ನಗರದ 50ರ ಪುರುಷ, ಡಿ.ಸಿ.ಎಂ. ಲೇಔಟ್ ನ 45ರ ಪುರುಷ, ಶಿರಮಗೊಂಡನಹಳ್ಳಿಯ 70ರ ವೃದ್ಧೆ, ತರಳಬಾಳು ಬಡಾವಣೆಯ 36ರ ಪುರುಷ, ಹೊಸನಾಯಕನಹಳ್ಳಿಯ 30ರ ಪುರುಷ, ಸಿದ್ದವೀರಪ್ಪ ಬಡಾವಣೆಯ 48ರ ಪುರುಷ,

ಡಿಎಆರ್ ಕ್ವಾಟ್ರಸ್‌ನ 17ರ ಯುವತಿ, ದೇವರಾಜ ಅರಸು 'ಸಿ' ಬ್ಲಾಕ್ 6ನೇ ಕ್ರಾಸ್ 12ರ ಬಾಲಕಿ, ಕುರುಬರ ಕೇರಿಯ 23ರ ಮಹಿಳೆ, ಕಾಡಜ್ಜಿಯ 26ರ ಪುರುಷ, ಆಂಜನೇಯ ಬಡಾವಣೆ 14ನೇ ಕ್ರಾಸ್ 20ರ ಮಹಿಳೆ, 58ರ ಪುರುಷ, ನಿಟುವಳ್ಳಿಯ 30ರ ಪುರುಷ, ಸರಸ್ವತಿ ನಗರದ 4ರ ಬಾಲಕ, ಶ್ರೀರಾಮನಗರದ 57ರ ಮಹಿಳೆ, ಹೊಸನಾಯಕನಹಳ್ಳಿ ಹದಡಿಯ 20ರ ಪುರುಷ, ದೇವರಾಜ ಅರಸು ಬಡಾವಣೆ ಮುಖ್ಯ ರಸ್ತೆ 38ರ ಮಹಿಳೆ, ಪಿಜೆ ಬಡಾವಣೆ 7ನೇ ಕ್ರಾಸ್ 54ರ ಮಹಿಳೆ.

ಎಂಸಿಸಿ ಎ ಬ್ಲಾಕ್ 15ರ ಬಾಲಕಿ, ಕುವೆಂಪು ನಗರದ 57ರ ಮಹಿಳೆ, ರಿಂಗ್ ರಸ್ತೆ ಎಸ್.ಎಸ್. ಬಡಾವಣೆ 21ರ ಮಹಿಳೆ, ಆಂಜನೇಯ ಬಡಾವಣೆ 38ರ ಪುರುಷ, ಭಗತ್ ಸಿಂಗ್ ನಗರದ 8ರ ಬಾಲಕ, ಡಿಸಿಎಂ ಲೇ ಔಟ್ 50ರ ಮಹಿಳೆ, ಶಿರಮಗೊಂಡನಹಳ್ಳಿಯ 14ರ ಯುವತಿ, ತರಳಬಾಳು ಬಡಾವಣೆ 60ರ ಮಹಿಳೆ, ರತ್ನಮ್ಮ ಮಹಿಳಾ ಹಾಸ್ಟೆಲ್ 23ರ ಮಹಿಳೆ, ಗಾಂಧಿ ನಗರ 1ನೇ ಮೇನ್ 40ರ ಮಹಿಳೆ, 45ರ ಮಹಿಳೆ, ಶಾಮನೂರಿನ 63ರ ಪುರುಷ.

ದಾವಣಗೆರೆ ಆಂಜನೇಯ ಬಡಾವಣೆಯ 45ರ ಪುರುಷ, ಸಿದ್ದವೀರಪ್ಪ ಬಡಾವಣೆ 7ನೇ ಕ್ರಾಸ್‌ನ 45 ರ ಮಹಿಳೆ, ಎಂಸಿಸಿ 'ಎ' ಬ್ಲಾಕ್ ಸಾಯಿಬಾಬಾ ದೇವಸ್ಥಾನದ ಬಳಿಯ 25ರ ಪುರುಷ, ಎಂಸಿಸಿ 'ಎ' ಬ್ಲಾಕ್ ಸಾಯಿಬಾಬಾ ದೇವಸ್ಥಾನದ ಬಳಿಯ 58ರ ಪುರುಷ, ಎಸ್.ಎಸ್. ಲೇಔಟ್‌ನ 25 ರ ಪುರುಷ, ಎಂಸಿಸಿ 'ಎ' ಬ್ಲಾಕ್‌ನ 57 ರ ಮಹಿಳೆ, ಚಿಗಟೇರಿ ಆಸ್ಪತ್ರೆಯ 30ರ ಪುರುಷ, ಆಲೂರಿನ 29ರ ಪುರುಷ, ಹೆಚ್‌ಕೆಆರ್ ಸರ್ಕಲ್, ನಿಟ್ಟುವಳ್ಳಿಯ 55ರ ಪುರುಷ, ವಿನೋಬನಗರ 3ನೇ ಮುಖ್ಯ ರಸ್ತೆ 6ನೇ ಕ್ರಾಸ್‌ನ 30ರ ಮಹಿಳೆ, ವಿನೋಬ ನಗರ 3ನೇ ಮುಖ್ಯರಸ್ತೆ 6ನೇ ಕ್ರಾಸ್‌ನ 65ರ ಮಹಿಳೆ, ಪಿ.ಜೆ. ಬಡಾವಣೆ ಕೆನರಾ ಬ್ಯಾಂಕ್ ಬಳಿಯ 45ರ ಪುರುಷ, ನಿಟುವಳ್ಳಿ ಕಾಲೇಜ್ ರೋಡ್‌ನ 49ರ ಪುರುಷ, ಭಗತ್‌ಸಿಂಗ್ ನಗರದ 60ರ ಪುರುಷ, ನಿಟುವಳ್ಳಿಯ 1 ವರ್ಷದ ಬಾಲಕ, ನಿಟುವಳ್ಳಿಯ 3 ವರ್ಷದ ಬಾಲಕಿ, ನಿಟುವಳ್ಳಿಯ 50ರ ಮಹಿಳೆ, 6ನೇ ಕಲ್ಲು ಬೆಳವನೂರು ಅಂಚೆ ತರಳಬಾಳು ನಗರದ 54ರ ಪುರುಷ, ನಿಟ್ಟುವಳ್ಳಿ ಹೊಸ ಬಡಾವಣೆಯ 44ರ ಪುರುಷ, ನಿಟ್ಟುವಳ್ಳಿಯ 18ರ ಪುರುಷ, ವಿನೋಬನಗರದ 40 ರ ಪುರುಷ, ಪಿ.ಬಿ. ರಸ್ತೆಯ 32 ರ ಮಹಿಳೆ, ಸಿದ್ದವೀರಪ್ಪ ಬಡಾವಣೆಯ 59ರ ಪುರುಷ, ಕೊಟ್ರೇಶ್ವರ ಬಡಾವಣೆಯ 32ರ ಪುರುಷ, ಸಂಕ್ಲೀಪುರದ 58 ರ ಮಹಿಳೆ, ಡಿಸಿಎಂ ಟೌನ್‌ಶಿಪ್‌ನ 43ರ ಪುರುಷ, ಡಿಸಿಎಂ ಟೌನ್‌ಶಿಪ್‌ನ 40ರ ಪುರುಷ, ಎಂಸಿಸಿ 'ಬಿ' ಬ್ಲಾಕ್‌ನ 64ರ ಮಹಿಳೆ, ಎಂಸಿಸಿ 'ಬಿ' ಬ್ಲಾಕ್‌ನ 65ರ ಮಹಿಳೆ, ಎನ್‌ಹೆಚ್ ಹಾಸ್ಟೆಲ್, ಎಸ್‌ಎಸ್ ಆಸ್ಪತ್ರೆ ಕ್ಯಾಂಪಸ್‌ನ 22 ರ ಮಹಿಳೆ, ಎಸ್‌ಎಸ್‌ಐಎಂಎಸ್ ಎಸ್ಟಾಬ್ಲಿಷ್‌ಮೆಂಟ್ ವಿಭಾಗದ 50ರ ಪುರುಷ, ಎಸ್‌ಎಸ್‌ಐಎಂಎಸ್ ಅಂಡ್ ಆರ್‌ಸಿಯ 25ರ ಪುರುಷ, ನಿಟುವಳ್ಳಿಯ 3 ವರ್ಷದ ಬಾಲಕ, ಬಾಪೂಜಿ ಸ್ಟಾಫ್ ನರ್ಸ್ 34ರ ಮಹಿಳೆ, ಬಾಪೂಜಿ ಆಸ್ಪತ್ರೆಯ ಬ್ಲಡ್ ಬ್ಯಾಂಕ್‌ನ ಸ್ಟಾಫ್ ನರ್ಸ್ 42ರ ಮಹಿಳೆ, ಲಕ್ಷ್ಮಿಸಾಗರ ಗ್ರಾಮದ 65ರ ಪುರುಷ, ಮೌನೇಶ್ವರ ಬಡಾವಣೆಯ 65ರ ಪುರುಷ, ವಿದ್ಯಾನಗರ 1ನೇ ಮುಖ್ಯರಸ್ತೆ, 9ನೇ ಕ್ರಾಸ್ ಡೋರ್ ನಂ. 3682/104ರ 66 ರ ಪುರುಷ, ಶಾಮನೂರು ಬಿಎಸ್‌ಎನ್‌ಎಲ್ ಟವರ್ ಬಳಿಯ 63ರ ಮಹಿಳೆ, ಎಂಸಿಸಿ 'ಎ' ಬ್ಲಾಕ್‌ನ 23ರ ಪುರುಷ, ಶಾಮನೂರಿನ 36ರ ಪುರುಷ, ವೊಡ್ಡಿನಹಳ್ಳಿಯ 52ರ ಪುರುಷ, ವಿವೇಕಾನಂದ ಬಡಾವಣೆಯ 58ರ ಪುರುಷ, ನಿಟುವಳ್ಳಿಯ 26 ರ ಮಹಿಳೆ, ಪಿ.ಜೆ. ಬಡಾವಣೆ ಪೊಲೀಸ್ ಕ್ವಾರ್ಟಸ್‌ನ 49ರ ಪುರುಷ, ವಿದ್ಯಾನಗರ ಹರಿಹರದ 55ರ ಪುರುಷ ಸೇರಿ ಒಟ್ಟು 318 ಜನರು ಸೋಂಕಿಗೆ ತುತ್ತಾಗಿದ್ದಾರೆ.

# ಪದವಿ ವಿದ್ಯಾಲಯಗಳು ಕೃವಿವಿ ವ್ಯಾಪ್ತಿಗೆ

**(1ನೇ ಪುಟದಿಂದ)** ವಿಧಾನ ಪರಿಷತ್ ಸದಸ್ಯರಾದ ಕೆ.ಸಿ. ಕೊಂಡಯ್ಯನವರು ಸತತವಾಗಿ ಎರಡೂ ವಿಶ್ವವಿದ್ಯಾಲಯ ಗಳಿಗೆ ಪತ್ರ ವ್ಯವಹಾರ ನಡೆಸಿ ಸರ್ಕಾರದ ಮೇಲೆ ಒತ್ತಡ ಹಾಕಿ ಹರಪನಹಳ್ಳಿ ತಾಲ್ಲೂಕಿನ ಪದವಿ ಕಾಲೇಜುಗಳನ್ನು ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರ್ಪಡೆಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕಾಗಿ ಹರಪನಹಳ್ಳಿ ಪದವಿ ವಿದ್ಯಾರ್ಥಿಗಳ ಪರವಾಗಿ ಕೆ.ಸಿ.ಕೊಂಡಯ್ಯನವರಿಗೆ ಎನ್.ಎಸ್.ಯು.ಐ ಜಿಲ್ಲಾ ಪ್ರಧಾನಕಾರ್ಯದರ್ಶಿ ಜೀಷಾನ್ ಎಂ.ಡಿ ಮತ್ತು ಹರಪನಹಳ್ಳಿ ತಾಲ್ಲೂಕು ಅಧ್ಯಕ್ಷ ಶ್ರೀಕಾಂತ್ ಯಾದವ ಅಭಿನಂದನೆ ತಿಳಿಸಿದ್ದಾರೆ.

ತಾಂತ್ರಿಕವಾಗಿ ಹರಪನಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆಗೆ ಸೇರಿದ್ದಾಗಿದ್ದರೂ ಕೂಡ ದಾಖಲಾತಿಗಳು ದಾವಣಗೆರೆ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಕಾರಣಕ್ಕೆ ವಿದ್ಯಾರ್ಥಿಗಳ ಮತ್ತು ಕಾಲೇಜುಗಳ ನಡುವೆ ಹಲವು ಗೊಂದಲಗಳು ಜೀವಂತವಾಗಿದ್ದವು. ಇದರಿಂದಾಗಿ ಕಲಂ 371 (ಜೆ) ಮಾನ್ಯತೆ ಪಡೆಯಲು ಕೂಡ ವಿದ್ಯಾರ್ಥಿ ಮತ್ತು ಪಾಲಕರುಗಳಲ್ಲಿ ಜಿಜ್ಞಾಸೆಗಳು ಮೂಡಿದ್ದವು. ಇದನ್ನು ನಿವಾರಿಸುವ ನಿಟ್ಟಿನಲ್ಲಿ ವಿಧಾನಪರಿಷತ್ ಸದಸ್ಯ ಕೆ.ಸಿ.ಕೊಂಡಯ್ಯ ಹರಪನಹಳ್ಳಿ ತಾಲ್ಲೂಕಿನ ಪದವಿ ಕಾಲೇಜುಗಳನ್ನು ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರುವಂತೆ ಮಾಡಿ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಿದ್ದಾರೆ. ಈ ಕುರಿತಾಗಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಸಿದ್ದು ಪಿ. ಅಲಗೂರು ಕೂಡ ಕೆ.ಸಿ.ಕೊಂಡಯ್ಯನವರ ಸಹಕಾರವನ್ನು ಅಭಿನಂದಿಸಿ ಪತ್ರ ಬರೆದು ಶುಭಾಶಯ ಕೋರಿದ್ದಾರೆ ಎಂದು ತಿಳಿಸಿದ್ದಾರೆ.

# ಕೊರೊನಾ : ಆರ್ಥಿಕ ಚಟುವಟಿಕೆಗೆ ಪುನಶ್ಚೇತನ ಅವಶ್ಯ



**ರಾಣೇಬೆನ್ನೂರು**

ರಾಣೇಬೆನ್ನೂರು, ಆ.25- ಇಂದಿನ ದಿನಗಳಲ್ಲಿ ಕೊರೊನಾ ಜೊತೆಯಾಗಿ ಬದುಕುತ್ತಾ ಆರ್ಥಿಕ ಚಟುವಟಿಕೆ ಗಳಿಗೆ ಪುನಶ್ಚೇತನ ನೀಡುವುದು ಅತ್ಯವಶ್ಯಕವಾಗಿದೆ ಎಂದು ಜಿ.ಪಂ. ಮಾಜಿ ಸದಸ್ಯ ಸಂತೋಷ ಪಾಟೀಲ ಹೇಳಿದರು.

ನಗರದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಸ್ಥಳೀಯ ಶಾಸಕ ಅರುಣ್‌ಕುಮಾರ್ ಪೂಜಾರ್ ಅವರ ಜನ್ಮ ದಿನದ ಪ್ರಯುಕ್ತ ಏರ್ಪಡಿಸಲಾಗಿದ್ದ ಕೊರೊನಾ ವಾರಿಯರ್ಸ್ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ಕೊರೊನಾ ತಡೆಗಟ್ಟುವಲ್ಲಿ ತಮ್ಮ ಜೀವದ ಹಂಗು ತೊರೆದು ಪ್ರಾಮಾಣಿಕವಾಗಿ ಹೋರಾಡುತ್ತಿರುವ ವಾರಿಯರ್ಸ್ ಬಗ್ಗೆ ಸೌಜನ್ಯದಿಂದ ನಡೆದುಕೊಳ್ಳಬೇಕು. ಮನೆಯಿಂದ ಹೊರಕ್ಕೆ ತೆರಳುವಾಗ ಪ್ರತಿಯೊಬ್ಬರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು ಎಂದರು.

ಶಾಸಕ ಅರುಣ್‌ಕುಮಾರ್ ಪೂಜಾರ್, ಜಿ.ಪಂ ಸದಸ್ಯರಾದ ಮಂಗಳಗೌರಿ ಪೂಜಾರ್, ಮಂಜುನಾಥ್ ಓಲೇಕಾರ್, ಬಸವರಾಜ್ ಕೇಲಗಾರ್, ತಾ.ಪಂ ಇಒ ಎಸ್.ಎಂ.ಕಾಂಬಳೆ ಮತ್ತಿತರರಿದ್ದರು.

## ಅತ್ತಿಗೆರೆಯ ಕಾಲೇಜಿಗೆ ಉಚಿತ ಪ್ರವೇಶ

ದಾವಣಗೆರೆ,ಆ.25- ತಾಲ್ಲೂಕಿನ ಅತ್ತಿಗೆರೆ ಗ್ರಾಮದ ಶ್ರೀಮತಿ ಚನ್ನಪ್ಪ ಶಿವಲಿಂಗಮ್ಮ ಗುರುಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ 2020-21ನೇ ವರ್ಷದ ಶೈಕ್ಷಣಿಕ ವರ್ಷದ ಕಲಾ ಮತ್ತು ವಾಣಿಜ್ಯ ಪಿಯುಸಿ ವಿದ್ಯಾರ್ಥಿ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಗ್ರಾಮೀಣ ಭಾಗದ ಬಡ-ಪ್ರತಿಭಾವಂತ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿನಿಯರಿಗೆ ಕುಂಠಿತವಾಗಿ ರುವ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಸೌಲಭ್ಯ ಒದಗಿಸಲಾಗಿದೆ. ಉಚಿತ ಸಮವಸ್ತ್ರ, ಉಚಿತ ವಿಶೇಷ ತರಗತಿ, ಉಚಿತ ಪಠ್ಯಪುಸ್ತಕ, ಗ್ರಂಥಾಲಯ, ಕ್ರೀಡಾ ಸಾಮಗ್ರಿ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ತರಬೇತಿ ನೀಡಲಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ಕಾಲೇಜನ್ನು ಸಂಪರ್ಕಿಸಬಹುದು.

## ಶ್ರೀದಾ ಸ್ಯಾರೀಸ್ ಮಾನ್‌ಸೂನ್ ಮಾರಾಟ ಮತ್ತು ಪ್ರದರ್ಶನ



ಡಿಸೈನರ್ ರಾಮ್ ಇವರಿಂದ ಹೊಚ್ಚ ಹೊಸ ಡಿಸೈನ್‌ಗಳ ನವೀನ ಮಾದರಿಯ ಸ್ಯಾರಿಗಳ ಪ್ರದರ್ಶನವನ್ನು ನಗರದ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಏರ್ಪಡಿಸಲಾಗಿದೆ.

ಇಂದು ಬೆಳಿಗ್ಗೆ 11ರಿಂದ ರಾತ್ರಿ 8.30ರವರೆಗೆ ಕೇವಲ ಒಂದು ದಿನ ಮಾತ್ರ ಪ್ರದರ್ಶನಗೊಳ್ಳಲಿದೆ. ಸಾಂಪ್ರದಾಯಿಕ ಸೊಬಗಿನ ಜೊತೆಗೆ ಸಮಕಾಲೀನತೆಯ ಸೊಗಡಿನ ಸೀರೆಗಳು ವಾರ್ಡ್‌ರೋಬ್‌ಗೆ ಹೊಸ ತಿರುವನ್ನೇ ನೀಡಬಹುದು.

ಕಲಾಕ್ಷೇತ್ರ ಶೈಲಿಯಲ್ಲಿ ಪರಿಣಿತಿ ಪಡೆದ ಡಿಸೈನರ್ ರಾಮ್ ಪುರಾತನ ಝರಿಗಳೊಂದಿಗೆ ಡೇ ಟು ಡೇ ಬನಾರಸ್ ಲೆನಿನ್, ಮಟ್ಕಾ, ಬನಾರಸ್, ಖಾದಿ, ಖೋರಾ, ಡಿಜಿಟಲ್ ಟಸರ್ ಸಿಲ್ಕ್, ಡಿಜಿಟಲ್ ಪ್ರಿಂಟ್, ಫ್ಯಾನ್ಸಿ ಸೀರೆಗಳ ಹೊಸ ಶ್ರೇಣಿಯನ್ನು ತಂದಿರುತ್ತಾರೆ. ವೀಣೆ ಹಾಗೂ ಸಿತಾರ್ ಮುಂತಾದ ಭಾರತೀಯ ಸಂಗೀತ ವಾದ್ಯಗಳ ಕಸುಬು ಝರಿ ಹಾಗೂ ಸೀರೆಯಲ್ಲಿ ಹರಡಿವೆ. ಕೈಗೆಟಕುವ ದರಗಳಲ್ಲಿ ಲಭ್ಯವಿರುವ ವಿನೂತನ ಶೈಲಿಯ ಎಲ್ಲಾ ಸೈಜುಗಳ ಕುರ್ತಿಸ್‌ಗಳ ವಿಶೇಷ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿದೆ ಎಂದು ಆಯೋಜಕರಾದ ಡಿಸೈನರ್ ರಾಮ್ ಅವರು ತಿಳಿಸಿದ್ದಾರೆ.

## ಜಿಲ್ಲಾ ಕಾಂಗ್ರೆಸ್‌ಗೆ ನೇಮಕ

ದಾವಣಗೆರೆ, ಆ.25- ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶದ ಮೇರೆಗೆ ಜಗಳೂರು, ಮಾಯಕೊಂಡ, ಚನ್ನಗಿರಿ, ಹೊನ್ನಾಳಿ ಸೇರಿದಂತೆ ತಾಲ್ಲೂಕು ಮತ್ತು ಬ್ಲಾಕ್‌ಗಳ ಹುದ್ದೆಗಳಿಗೆ ನೇಮಕ ಮಾಡಲಾಗಿದೆ.

ಕೋ-ಆರ್ಡಿನೇಟರ್‌ಗಳಾಗಿ ಕಲ್ಲೇಶ್‌ರಾಜ್, ಬಿಳಿಚೋಡು ಬಿ.ಟಿ. ಜಗದೀಶ್, ಡಾ. ಇಮ್ತಿಯಾಜ್ ಅಹಮ್ಮದ್ ಹರಿಹರ, ಟಿ.ಎನ್. ಶ್ರೀನಿವಾಸ್ ಮಲೇಬೆನ್ನೂರು, ಬಿ.ಜಿ. ಚಂದ್ರಶೇಖರ್ ಮಾಯಕೊಂಡ, ಶಿವನಾಯ್ಕ್ ಬಸವಾಪಟ್ಟಣ, ಎ.ಎಂ. ಅಮೃತೇಶ್ವರ ಸ್ವಾಮಿ ದಾವಣಗೆರೆ ಉತ್ತರ, ಮೋಕ್ಷದಾಯಿನಿ ದಾವಣಗೆರೆ ಉತ್ತರ ಕಸಬಾ ಇವರು ನೇಮಕಗೊಂಡಿದ್ದಾರೆ.

ದಾವಣಗೆರೆ ದಕ್ಷಿಣದ ಕೋ- ಆರ್ಡಿನೇಟರ್ ಆಗಿ ಧ್ರುವಕುಮಾರ್, ದಾವಣಗೆರೆ ದಕ್ಷಿಣ ಕಸಬಾ ಕೋ-ಆರ್ಡಿನೇಟರ್ ಆಗಿ ಎ.ಎಂ. ವಿಶ್ವನಾಥ್, ಶಿವಮೊಗ್ಗ ಕೋ-ಆರ್ಡಿನೇಟರ್ ಆಗಿ ಹೆಚ್.ಸಿ. ಯೋಗೇಶ್, ಎಸ್.ಡಿ. ರಾಜೇಂದ್ರ ಸಂತೇಬೆನ್ನೂರು, ರವಿಕುಮಾರ್ ಹೊನ್ನಾಳಿ ಹಾಗೂ ಸಾಸ್ವೆಹಳ್ಳಿ ಆರ್. ಮೋಹನ್ ನೇಮಕಗೊಂಡಿದ್ದಾರೆ.

## ಎಸ್.ಪಿ.ಬಾಲಸುಬ್ರಹ್ಮಣ್ಯಂ ಗುಣಮುಖರಾಗಲೆಂದು ಹಾರೈಸಲು ಕರೆ



ದಾವಣಗೆರೆ, ಆ.25- ಹೆಸರಾಂತ ಹಿನ್ನೆಲೆ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಕೊರೊನಾ ಪೀಡಿತರಾಗಿ ಚೆನ್ನೈ ಆಸ್ಪತ್ರೆಯಲ್ಲಿದ್ದಾರೆ. ಅವರು ಶೀಘ್ರ ಗುಣಮುಖರಾಗಲು ನಾಡಿನ ಎಲ್ಲಾ ಜನತೆ ಶುಭ ಹಾರೈಸೋಣ ಎಂದು ರೈತ ಮುಖಂಡ ಎನ್.ಜಿ.ಪುಟ್ಟಸ್ವಾಮಿ ಅವರು ಮನವಿ ಮಾಡಿದ್ದಾರೆ. ದಕ್ಷಿಣ ಭಾರತದ ಐದು ಭಾಷೆಗಳಲ್ಲಿ 40 ಸಾವಿರ ಹಾಡುಗಳನ್ನು ಹಾಡಿರುವ ಎಸ್‌ಪಿಬಿ, ಕನ್ನಡ ಸಂಗೀತ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಿನಿಮಾ ಸಂಗೀತವನ್ನು ಶ್ರೀಮಂತಗೊಳಿಸಿದ್ದಾರೆ.ವಿನಯಶೀಲರೂ, ಸುಸಂಸ್ಕೃತರೂ ಆಗಿ ರುವ ಅವರು ಚೇತರಿಸಿಕೊಂಡು ಮತ್ತೆ ಹಾಡುವಂತಾಗಲಿ. ಅದನ್ನು ನೋಡುವ ಭಾಗ್ಯ ನಮ್ಮೆಲ್ಲರದಾಗಲಿ ಎಂದಿರುವ ಪುಟ್ಟಸ್ವಾಮಿ, ನಾಡಿನ ಎಲ್ಲಾ ಜನತೆ ಅವರ ಆರೋಗ್ಯ ಭಾಗ್ಯಕ್ಕಾಗಿ ದೇವರಲ್ಲಿ ಪ್ರಾರ್ಥಿಸುವಂತೆ ಕರೆ ನೀಡಿದ್ದಾರೆ.

## ಮಲೇಬೆನ್ನೂರು ಹೋಬಳಿಯಲ್ಲಿ 20 ಜನರಿಗೆ ಸೋಂಕು: 143 ಜನರಿಗೆ ಟೆಸ್ಟ್

ಮಲೇಬೆನ್ನೂರು, ಆ.25- ಪಟ್ಟಣದಲ್ಲಿ ಕಳೆದ 3 ದಿನಗಳಲ್ಲಿ 9 ಜನರಿಗೆ ಮತ್ತು ಯಲವಟ್ಟಿ, ಜಿಗಳಿ, ಕಮಲಾಪುರ, ಕೆ.ಎನ್.ಹಳ್ಳಿ, ನಂದಿತಾವರೆ, ಉಕ್ಕಡಗಾತ್ರಿ, ಹಾಲಿವಾಣ, ಕುಂಬಳೂರು, ವಡೆಯರ ಬಸಾಪುರ ಗ್ರಾಮಗಳಲ್ಲಿ ತಲಾ ಒಬ್ಬೊಬ್ಬರಿಗೆ ಹಾಗೂ ಕೊಮಾರನಹಳ್ಳಿಯಲ್ಲಿ ಇಬ್ಬರು ಮಹಿಳೆಯರಿಗೆ ಕೊರೊನಾ ಸೋಂಕು ತಗುಲಿದೆ ಎಂದು ಉಪತಹಶೀಲ್ದಾರ್ ರವಿ ತಿಳಿಸಿದ್ದಾರೆ.

**143 ಜನರಿಗೆ ಟೆಸ್ಟ್ :** ಸೋಮವಾರ ಜಿಗಳಿಯಲ್ಲಿ 74, ನಂದಿತಾವರೆಯಲ್ಲಿ 40 ಜನರಿಗೆ ಮತ್ತು ಮಂಗಳವಾರ ಕೆ.ಎನ್.ಹಳ್ಳಿಯಲ್ಲಿ 20, ವಡೆಯರ ಬಸಾಪುರದಲ್ಲಿ 9 ಜನರಿಗೆ ಕೊರೊನಾ ಟೆಸ್ಟ್ ಮಾಡಲಾಗಿದೆ ಎಂದು ಹಿರಿಯ ಆರೋಗ್ಯ ಸಹಾಯಕ ಎಂ.ಉಮಣ್ಣ ಮಾಹಿತಿ ನೀಡಿದ್ದಾರೆ.

## ಐಟಿಐ ಕೋರ್ಸಿಗೆ ಆನ್‌ಲೈನ್ ಪ್ರವೇಶ

ದಾವಣಗೆರೆ, ಆ.25- ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಆನ್‌ಲೈನ್ ಪ್ರವೇಶಕ್ಕೆ ಅಧಿಸೂಚನೆ ಹೊರಡಿಸಲಾಗಿದ್ದು, ಸಂಸ್ಥೆಯಲ್ಲಿ ಲಭ್ಯವಿರುವ ವಿವಿಧ ವೃತ್ತಿಗಳಿಗೆ ಸಂಬಂಧಿಸಿದ ಕೋರ್ಸುಗಳಿಗೆ ಪ್ರವೇಶ ಬಯಸುವ ಅರ್ಹ ಅಭ್ಯರ್ಥಿಗಳು ಇಂದಿನಿಂದ ಇದೇ ದಿನಾಂಕ 31 ರವರೆಗೆ www.emptrg.kar.nic.in ಈ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

# ಹಾಂಕಾಂಗ್ ವ್ಯಕ್ತಿಗೆ 2ನೇ ಬಾರಿ ಕೊರೊನಾ

**(1ನೇ ಪುಟದಿಂದ)** ಹಲವಾರು ಪ್ರಶ್ನೆಗಳು ಉದ್ಭವಿಸಿವೆ. ಕೊರೊನಾ ಸೋಂಕು ಒಬ್ಬನೇ ವ್ಯಕ್ತಿಗೆ ಮತ್ತೆ ಮತ್ತೆ ಬರುತ್ತದೆಯೇ? ಅದರ ಬೇರೆ ಬೇರೆ ರೂಪಾಂತರಣದ ಸೋಂಕುಗಳ ಕಾರಣ ದಿಂದಾಗಿ ಲಸಿಕೆ ಕೆಲಸ ಮಾಡುವುದಿ ಲ್ಲವೇ? ಶೀತದಂತೆಯೇ ಕೊರೊನಾ ಸೋಂಕೂ ಸಹ ಮತ್ತೆ ಮತ್ತೆ ಬರುತ್ತ ದೆಯೇ? ಒಮ್ಮೆ ಸೋಂಕು ಬಂದ ನಂತರ, ಇನ್ನೊಮ್ಮೆ ಸೋಂಕು ಬಂದರೂ ಅದು ತೀವ್ರ ಸ್ವರೂಪದ್ದಾಗಿರುವು ದಿಲ್ಲವೇ? ಎಂಬೆಲ್ಲ ಪ್ರಶ್ನೆಗಳು ಈಗ ಸಂಶೋಧಕರನ್ನು ಕಾಡತೊಡಗಿವೆ.

ಕೊರೊನಾ ವೈರಸ್ ಮನುಷ್ಯರಲ್ಲಿ ಉಳಿದುಕೊಂಡೇ ಇರುತ್ತದೆ ಎಂಬುದು ನಮ್ಮ ಸಂಶೋಧನೆಗಳು ಇಂಗಿತ ವ್ಯಕ್ತಪ ಡಿಸುತ್ತಿವೆ ಎಂದು ಹಾಂಕಾಂಗ್ ವಿಶ್ವವಿದ್ಯಾ ನಿಲಯದ ಕ್ವಾಕ್ - ಯಂಗ್ ಮತ್ತು ಸಹೋದ್ಯೋಗಿಗಳು ಹೇಳಿದ್ದಾರೆ.

ರೋಗಿಯಲ್ಲಿ ರೋಗ ನಿರೋಧಕ ಶಕ್ತಿ ಬಂದರೂ ಸಹ ಸಾಮಾನ್ಯ ಶೀತದ ರೀತಿಯಲ್ಲೇ ಕೊರೊನಾ ವೈರಸ್ ಸೋಂಕೂ ಸಹ ಮತ್ತೆ ಮತ್ತೆ ಬರುತ್ತದೆ ಎಂಬುದರತ್ತ ನಮ್ಮ ಸಂಶೋಧನೆ ಇಂಗಿತ ವ್ಯಕ್ತಪಡಿಸುತ್ತಿದೆ. ಸಹಜ ಸೋಂಕಿನಿಂದ ಇಲ್ಲವೇ ಲಸಿಕೆಯ ಮೂಲಕ ರೋಗ ನಿರೋಧಕತೆ ಪಡೆದರೂ ಸೋಂಕು ತಪ್ಪದು ಎಂದವರು ತಿಳಿಸಿದ್ದಾರೆ.

ಕೊರೊನಾ ಸೋಂಕಿತರ ಪೈಕಿ ಕೆಲವರಲ್ಲಿ ಹಲವಾರು ವಾರಗಳ ಕಾಲ ವೈರಸ್ ಇರುವುದು ಕಂಡು ಬಂದಿತ್ತು. ರೋಗ ಲಕ್ಷಣಗಳು ನಿವಾರಣೆಯಾದರೂ ವೈರಸ್ ಹೋಗಿರಲಿಲ್ಲ. ಹೀಗಾಗಿ ವೈರಸ್ ಗುಣಲಕ್ಷಣಗಳ ಬಗ್ಗೆ ವಿಜ್ಞಾನಿಗಳಿಗೆ ಇನ್ನೂ ಪೂರ್ಣ ಚಿತ್ರಣ ಸಿಕ್ಕಿಲ್ಲ.

ಕೊರೊನಾದಿಂದ ಚೇತರಿಸಿಕೊಂಡ ರೋಗಿಯೊಬ್ಬರಲ್ಲಿ, ಇನ್ನೊಂದು ಸ್ವರೂಪದ ಕೊರೊನಾ ಬಂದಿರುವ ಮೊದಲ ಅಧಿಕೃತವಾಗಿ ದಾಖಲಿಸಲ್ಪಟ್ಟ ಪ್ರಕರಣ ಇದಾಗಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಒಮ್ಮೆ ಕೊರೊನಾದಿಂದ ಚೇತರಿಸಿಕೊಂಡವರಲ್ಲಿ, ಇನ್ನೊಮ್ಮೆ ಸೋಂಕು ಬಂದಾಗಲೂ ಲಕ್ಷಣಗಳು ಕಾಣದೇ ಇರಬಹುದು. ಹೀಗಾಗಿ ಅಂಥವರ ಪತ್ತೆ ಕಷ್ಟಸಾಧ್ಯ ಎಂದು ಬ್ರಿಸ್ಬೇನ್‌ನಲ್ಲಿರುವ ಕ್ಯೂ.ಐ.ಎಂ.ಆರ್. ಬೆರ್ಘೋಫರ್ ಮೆಡಿಕಲ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ ಕೇರಿ ಸ್ಮಿತ್ ಅಭಿಪ್ರಾಯಪಟ್ಟಿದ್ದಾರೆ.

ಎರಡನೇ ಬಾರಿ ಸೋಂಕು ಬಂದಾಗ ವ್ಯಕ್ತಿಯಲ್ಲಿ ಲಕ್ಷಣಗಳು ಕಂಡಿಲ್ಲ. ಮೊದಲ ಬಾರಿ ಸೋಂಕು ಬಂದಾಗಿನ ರೋಗ ನಿರೋಧಕ ಸ್ಪಂದನೆಯ ನೆನಪು ದೇಹಕ್ಕಿರಬಹುದು. ಹೀಗಾಗಿ ಲಕ್ಷಣ ಹೊಂದಿದ ರೋಗ ಬಂದಿರಲಿಕ್ಕಿಲ್ಲ ಎಂದವರು ತಿಳಿಸಿದ್ದಾರೆ.

ಸಹಜ ಸೋಂಕಿನ ಕಾರಣದಿಂದಾಗಿ ರೋಗ ನಿರೋಧಕತೆ ಬಂದಾಗ ಅದು ರೋಗದಿಂದ ರಕ್ಷಣೆ ನೀಡುತ್ತದೆಯೇ ವಿನಃ, ಮತ್ತೆ ರೋಗ ಬರುವುದನ್ನು ತಡೆಯಲು ಅಲ್ಲ ಎಂಬುದು ಇದರಿಂದ ತಿಳಿಯುತ್ತದೆ ಎಂದವರು ಹೇಳಿದ್ದಾರೆ.

ಮತ್ತೆ ಸೋಂಕು ಬರುವುದನ್ನು ತಪ್ಪಿಸಲಾಗದು ಎಂದು ಓಹಿಯೋದ ಅಕ್ರಾನ್‌ನಲ್ಲಿರುವ ಸುಮ್ಮ ಹೆಲ್ತ್ ಆಸ್ಪತ್ರೆಯ ಪರಿಣಿತರಾದ ಥಾಮಸ್ ಫೈಲ್ ಹೇಳಿದ್ದು, ರೋಗದಿಂದ ರಕ್ಷಣೆ ಪಡೆಯುವ ಸಾಮರ್ಥ್ಯ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ ಎಂದಿದ್ದಾರೆ.

ಕೊರೊನಾ ವೈರಸ್ ಪ್ರಭೇದಗಳಿಂದ ಸೋಂಕು ಉಂಟಾದಾಗ ಕಂಡು ಬರುವ ರೋಗ ನಿರೋಧಕತೆಯು ನಾಲ್ಕು ತಿಂಗಳಿನಿಂದ ಹಿಡಿದು ಒಂದು ಇಲ್ಲವೇ ಎರಡು ವರ್ಷಗಳವರೆಗೆ ಇರುತ್ತದೆ ಎಂದು ಫೈಲ್ ತಿಳಿಸಿದ್ದಾರೆ.

## ಅತಿಯಾದ ಗಾಬರಿ ಬೇಡ

**(1ನೇ ಪುಟದಿಂದ)** ಎಂದಿದ್ದಾರೆ.

ವ್ಯಕ್ತಿಯಲ್ಲಿನ ರೋಗ ನಿರೋಧಕ ಸಾಮರ್ಥ್ಯ ಹಾಗೂ ವೈರಸ್ ಯಾವ ರೀತಿ ಮ್ಯುಟೇಟ್ ಆಗಿದೆ ಇಲ್ಲವೇ ತೀವ್ರ ಸ್ವರೂಪ ಪಡೆದಿದೆ ಎಂಬ ಎಲ್ಲವನ್ನೂ ಆಧರಿಸಿ ಈ ವಿಷಯ ನಿರ್ಧಾರವಾಗುತ್ತದೆ ಎಂದಿರುವ ಅವರು, ಮತ್ತೆ ಕೊರೊನಾ ವೈರಸ್ ಬಂದಿರುವ ಒಂದೇ ಒಂದು ಪ್ರಕರಣ ಇದಾಗಿದೆ. ಇದು ಅಪರೂಪದ ಪ್ರಕರಣ ಎಂದು ಅಭಿಪ್ರಾಯ ಪಟ್ಟಿದ್ದಾರೆ. ದಡಾರ ಒಮ್ಮೆ ಬಾಧಿಸಿದ ನಂತರ ರೋಗ ನಿರೋಧಕತೆ ಜೀವನವಿಡೀ ಇರುತ್ತದೆ. ಎರಡನೇ ಬಾರಿ ದಡಾರ ಬರುವುದು ಬಹಳ ಅಪರೂಪ. ಅದೇ ರೀತಿ, ಹಾಂಕಾಂಗ್‌ನದ್ದು ಅಪರೂಪದ ಪ್ರಕರಣ. ರೋಗ ನಿರೋಧಕತೆ ಎಷ್ಟು ಅವಧಿಯವರೆಗೆ ಇರುತ್ತದೆ ಎಂಬುದನ್ನು ನಾವು ಪತ್ತೆ ಮಾಡಬೇಕಿದೆ ಎಂದವರು ತಿಳಿಸಿದ್ದಾರೆ.

## ಚಿಕಿತ್ಸೆ ಕೊಡಲ್ಲ

**(1ನೇ ಪುಟದಿಂದ)** ಆಸ್ಪತ್ರೆಗಳಲ್ಲಿ ರೋಗಿಗಳ ಪ್ರವೇಶಕ್ಕೆ ಅನುಕೂಲ ಮಾಡಿಕೊಡಲು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳ ತಂಡ ರಚನೆಗೆ ಸೂಚಿಸಿದ್ದರೂ, ಇಲ್ಲಿಯವರೆಗೆ ಯಾವ ತಂಡವೂ ರಚನೆಯಾಗಿಲ್ಲ ಎಂದರು.

ಪ್ರಸ್ತುತ ನಾನ್ ಕೋವಿಡ್ ರೋಗಿಗಳಿಗೂ ಆಕ್ಸಿಜನ್, ವೆಂಟಿಲೇಟರ್ ಅಗತ್ಯವಿರುತ್ತದೆ. ಆದರೆ ಜಿಲ್ಲಾಸ್ಪತ್ರೆಯಲ್ಲಿ ಎಲ್ಲಾ ಆಕ್ಸಿಜನ್ ಬೆಡ್‌ಗಳು ಕೋವಿಡ್ ರೋಗಿಗಳಿಗೆ ಸೀಮಿತವಾಗಿವೆ. ನಾನ್ ಕೋವಿಡ್ ರೋಗಿಗಳು ಆಕ್ಸಿಜನ್ ಇಲ್ಲದೆ ಸಾವನ್ನಪ್ಪುತ್ತಿದ್ದಾರೆ ಎಂದರು. ಸಿಇಒ ಪದ್ಮಾ ಬಸವಂತಪ್ಪ ಉತ್ತರಿಸುತ್ತಾ, ಬಹುತೇಕ ರೋಗಿಗಳು ಕಾಯಿಲೆ ಹೆಚ್ಚಾಗಿ ಕೊನೆ ಗಳಿಗೆಯಲ್ಲಿ ಆಸ್ಪತ್ರೆಗೆ ಬರುತ್ತಿರುವುದರಿಂದ ಸಮಸ್ಯೆ ಹೆಚ್ಚಾಗುತ್ತಿದೆ ಎಂದರು.




ವಿದೇಶ ಪ್ರಯಾಣ - ಶುಭ ಹಾರೈಕೆಗಳು

ಎಂ.ಎಸ್. ವಿದ್ಯಾಭ್ಯಾಸಕ್ಕಾಗಿ
ದಿನಾಂಕ 27.08.2020ರಂದು ಬೆಂಗಳೂರು
ಮೂಲಕ ಪ್ಯಾರೀಸ್‌ಗೆ ತೆರಳುತ್ತಿರುವ
ದಿ|| ಚಿಗಟೇರಿ ಅಣಿಯಪ್ಪ ಸಿ.ಕೆ. ಮಹಾರುದ್ರಪ್ಪ
ಮತ್ತು ದಿ|| ಶ್ರೀಮತಿ ಲಲಿತಮ್ಮ ದಂಪತಿ ಮೊಮ್ಮಗ,
ಶ್ರೀ ಸಿ.ಎಂ. ಕೊಟ್ರೇಶ್ ಮತ್ತು
ಶ್ರೀಮತಿ ಸವಿತಾ ಕೊಟ್ರೇಶ್ ದಂಪತಿ ಪುತ್ರ
ಶ್ರೀ ಶಶಾಂಕ್ ಸಿ.ಕೆ.
ಅವರಿಗೆ ಹಾರ್ದಿಕ ಶುಭಾಶಯಗಳು.

✦ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಸಚಿವರು
✦ ಶ್ರೀ ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿಗಳು ✦ ಶ್ರೀ ಹನುಮಂತರಾಯಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ದಾವಣಗೆರೆ
✦ ಡಾ|| ರಾಘವನ್ ✦ ಡಾ|| ವೆಂಕಟೇಶ್ ✦ ಡಾ|| ಯತೀಶ್ ✦ ಡಾ|| ಗಿರೀಶ್
✦ ಆರೋಗ್ಯ ಇಲಾಖೆ ಮತ್ತು ಚಿಗಟೇರಿ ಜಿಲ್ಲಾ ಆಸ್ಪತ್ರೆ ಸಿಬ್ಬಂದಿ ವರ್ಗ
✦ ಬಿ. ತಿಪ್ಪೇಶ್, ವಿನಾಯಕ ಸ್ಟೀಲ್ಸ್ ✦ ಶ್ರೀಮತಿ ನಂದಿನಿ ಮತ್ತು ಸಿ.ಎಂ. ಗಿರೀಶ್ ಹಾಗೂ ಕುಟುಂಬ ವರ್ಗ
✦ ಶ್ರೀಮತಿ ಸುನಂದ ಮತ್ತು ಸಿ.ಎಂ. ರುದ್ರೇಶ್ ಹಾಗೂ ಕುಟುಂಬ ವರ್ಗ
✦ ಭಗವತಿ ಎನ್. ಸ್ವಾಮಿ, ಜ್ಯೋತಿಷಿಗಳು, ಹರಿಹರ. ✦ ಗುಂಡಗತ್ತಿ ಗಂಗಾಧರ, ಶಿವಮೊಗ್ಗ.
✦ ಕು|| ಸಿ.ಕೆ. ಶ್ರೇಯ, ಸ್ಪಂದನ, ನಮನ, ಚಿ|| ಸಿ.ಕೆ. ಸುಶಾಂತ್ ಹಾಗೂ ಚಿಗಟೇರಿ ಅಣಿಯಪ್ಪ ವಂಶಸ್ಥರು, ದಾವಣಗೆರೆ.
SPOTON & VXPRESS CARGO SERVICE (All India Parcel Service)



ಅಕ್ಷರಜ್ಯೋತಿ ಎಜುಕೇಷನ್ ಟ್ರಸ್ಟ್ (ರಿ.)
ರೂರಲ್ ಪಬ್ಲಿಕ್ ಸ್ಕೂಲ್, ದಿದ್ದಿಗೆ.
(ಆಂಗ್ಲ ಮಾಧ್ಯಮ ವಸತಿಯುತ ಶಾಲೆ)



2019-20ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು




ಈ ಫಲಿತಾಂಶಕ್ಕೆ ಸಹಕರಿಸಿದ ಶಾಲೆಯ ಎಲ್ಲಾ ಶಿಕ್ಷಕ, ಶಿಕ್ಷಕೇತರ ವರ್ಗ, ಪೋಷಕರು ಹಾಗೂ ದಿದ್ದಿಗೆ ಗ್ರಾಮಸ್ಥರಿಗೆ ಶಾಲಾ ಆಡಳಿತ ಮಂಡಳಿ ವತಿಯಿಂದ ಹೃದಯ ಪೂರ್ವಕ ಧನ್ಯವಾದಗಳು

WE ARE HIRING

Teacher willing to serve in rural area for the growth of rural students with high ambition, here's a great opportunity to fulfill your dreams.

THE TEACHERS WHO ARE WORKING IN THE COMPETITIVE ENVIRONMENT WITH ZERO TO 20 YEARS OF EXPERIENCE, CAN JOIN US TO CREATE THE BETTER WORLD

POSITION AVAILBLE

| SUBJECT | Qulification | NUMBER OF POSTS |
|---|---|---|
| KANNADA | D.Ed, B.A B.Ed, M.A B.Ed | 03 |
| ENGLISH | D.Ed, B.A B.Ed, M.A B.Ed | 03 |
| HINDI | D.Ed, B.A B.Ed, M.A B.Ed | 03 |
| MATHEMATICS | D.Ed, B.Sc B.Ed, M.Sc B.Ed | 03 |
| SOCIAL SCIENCE | D.Ed, B.A B.Ed, M.A B.Ed | 03 |
| PHYSICAL EDUCATION | B.A B.P.Ed | 02 |
| COMPUTER TEACHER | Any Degree | 01 |
| KG TEACHER | Montessori or Equivalent | 04 |
| COORDINATOR FOR KG'S | Montessori or Equivalent (minimum 8 to 10 years of Experince) | 01 |
| D-Group | 7th Pass | 02 |
| Driver | Heavy badge, Married | 06 |

Note: 1) Best opportunity for fresh college outputs. (2) Boarding facility is available. (3) Competitive salary will be offered to the right teachers. (4) Teachers with required qualification can walk in for the interview.

" Interested Teachers can attend the interview from 25th August 10.00AM "
Email Id : aksharajyothirps@gmail.com, Place : RURAL PUBLIC SCHOOL, DIDDIGE
Contact : No :- 99025 46021, 98800 12819

## ಎಸ್ಪಿಎಸ್ಸೆಸ್ ಪಿಯು ವಿಜ್ಞಾನ, ವಾಣಿಜ್ಯ ಕಾಲೇಜು ಕಟ್ಟಡ ಉದ್ಘಾಟನೆ



ದಾವಣಗೆರೆ, ಆ. 23- ನಗರದ ಹೊರವಲಯದ ಶಿವಗಂಗೋತ್ರಿ ಆವರಣದಲ್ಲಿರುವ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ಶಾಲೆಯ ಪಕ್ಕದಲ್ಲಿ ಅತ್ಯಾಧುನಿಕ ಸೌಲಭ್ಯಗಳುಳ್ಳ ಪ್ರತ್ಯೇಕ ಬಾಪೂಜಿ ವಿದ್ಯಾಸಂಸ್ಥೆಯ ಎಸ್.ಪಿ.ಎಸ್.ಎಸ್. ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡದ ಉದ್ಘಾಟನೆಯನ್ನು ಸಂಸ್ಥೆಯ ಅಧ್ಯಕ್ಷ ಎಸ್. ಎಸ್. ಗಣೇಶ್ ನೆರವೇರಿಸಿದರು.

ಈ ಸಂದರ್ಭದಲ್ಲಿ ಅಭಿಜಿತ್ ಶಾಮನೂರು, ಬಿಐಇಟಿ ಕಾಲೇಜು ನಿರ್ದೇಶಕ ಡಾ. ವೈ. ವೃಷಭೇಂದ್ರಪ್ಪ, ಶಾಲೆ ಮತ್ತು ಕಾಲೇಜಿನ ಮುಖ್ಯಸ್ಥ ಮಂಜುನಾಥ ರಂಗರಾಜು, ಡಾ.ಚಂದ್ರಶೇಖರ್, ಜಿ.ಬಿ.ಸುರೇಶ್ ಕುಮಾರ್, ಜೆ ಪದ್ಮನಾಭ, ಸಮರೇಂದ್ರ ಪಾಣಿಗ್ರಹಿ, ಪ್ರಾಂಶುಪಾಲ ಜೆ.ಎಸ್.ವನಿತಾ ಇತರರು ಉಪಸ್ಥಿತರಿದ್ದರು. ಇದೇ ವೇಳೆ ಎಸ್.ಎಸ್. ಗಣೇಶ್ ಅವರ ಜನ್ಮದಿನವನ್ನೂ ಆಚರಿಸಲಾಯಿತು.

## ಅಪ್ಪರ್ ಭದ್ರಾ ಯೋಜನೆಯ ವರದಿ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಆಗ್ರಹ

ದಾವಣಗೆರೆ, ಆ.25- ಜಗಳೂರು ತಾಲ್ಲೂಕಿನ ಅಪ್ಪರ್ ಭದ್ರಾ ಯೋಜನೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ನೀಡಿದ ವರದಿಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ನೀರಾವರಿ ತಜ್ಞ ಕೆ.ಬಿ. ಕಲ್ಲೇರುದ್ರೇಶ್ ಒತ್ತಾಯಿಸಿದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ತಜ್ಞರ ಸಮಿತಿ ರಚನೆಯಾಯಿತು. ನಂತರ ಮುಖ್ಯಮಂತ್ರಿಯಾಗಿ ಬಂದ ಹೆಚ್.ಡಿ. ಕುಮಾರಸ್ವಾಮಿ, ಜಗಳೂರು ತಾಲ್ಲೂಕಿಗೆ 2.4 ಟಿಎಂಸಿ ನೀರನ್ನು ಹರಿಸಲು ತಜ್ಞರ ಸಮಿತಿ ವರದಿ ನೀಡಿತ್ತು. ಇದೀಗ ಮುಖ್ಯಮಂತ್ರಿಗಳಾಗಿರುವ ಬಿ.ಎಸ್. ಯಡಿಯೂರಪ್ಪ ಸರ್ಕಾರ ಬಂದು ವರ್ಷ ಕಳೆದರೂ ಇದುವರೆಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಕೂಡಲೇ ರಾಜ್ಯಪತ್ರದಲ್ಲಿ ಪ್ರಕಟಿಸಬೇಕು ಹಾಗೂ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ನಮ್ಮ ತಾಲ್ಲೂಕಿನ ವ್ಯಾಪ್ತಿಗೆ ಬರುವ ಕೆರೆಗಳು, 57 ಕೆರೆಗಳ ದೀಟೂರು ಏತ ನೀರಾವರಿ ಯೋಜನೆಯಲ್ಲಿ ಸೇರ್ಪಡೆ ಮಾಡಬೇಕೆಂದು ಆಗ್ರಹಿಸಿದರು.

## ಸೋನಿಯಾಗೆ ಕ್ಷಮೆ ಯಾಚಿಸಿದ ಮೊಯ್ಲಿ

(1ನೇ ಪುಟದಿಂದ) ಪತ್ರವನ್ನು ಮಾಧ್ಯ ಮಗಳಿಗೆ ಸೋರಿಕೆ ಮಾಡಿದ್ದು ಸರಿ ಯಲ್ಲ ಎಂದಿರುವ ಮೊಯ್ಲಿ, ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಮಾಡಿ ಶಿಕ್ಷಿಸಬೇಕಿದೆ ಎಂದಿದ್ದಾರೆ. ಪತ್ರಕ್ಕೆ ಸಹಿ ಹಾಕಿರುವ 23 ನಾಯಕ ರಲ್ಲಿ ಯಾರೂ ಕಾಂಗ್ರೆಸ್ ಬಿಡುವ ಉದ್ದೇಶ ಹೊಂದಿಲ್ಲ. ನಾವೆಂದೂ ಸೋನಿಯಾಜಿ ಅವರ ನಾಯಕತ್ವ ಪ್ರಶ್ನಿಸಿಲ್ಲ ಎಂದವರು ಸ್ಪಷ್ಟಪಡಿಸಿದ್ದಾರೆ.

# ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಕಮ್ಯುನಿಸ್ಟ್ ಆಗ್ರಹ



ದಾವಣಗೆರೆ, ಆ.25- ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎರಡು ಕಡೆಯ ಸ್ಮಶಾನಗಳಲ್ಲಿ ಮೃತದೇಹಗಳ ದಹನಕ್ಕೆ ವಿದ್ಯುತ್ ಚಿತಾಗಾರವನ್ನು ನಿರ್ಮಿಸುವುದು ಸೇರಿದಂತೆ ಶವ ಸಂಸ್ಕಾರಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ನಗರದ ಸಾರ್ವಜನಿಕರ ಪರವಾಗಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿಯಿಂದ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮೂಲಕ ನಗರ ಪಾಲಿಕೆಗೆ ಆಗಮಿಸಿದ ಸಂಘಟನೆಯ ಮುಖಂಡರು, ಕಾರ್ಯಕರ್ತರು ಚಳವಳಿ ನಡೆಸಿದರು. ನಂತರ ಮೃತದೇಹವನ್ನು ಸಾಗಿಸಲು ಉಚಿತವಾಗಿ ವಾಹನ ಸೌಕರ್ಯದ ವ್ಯವಸ್ಥೆ ಹಾಗೂ ಮೃತದೇಹವನ್ನು ಹೂಳಲು ಸ್ಮಶಾನದಲ್ಲಿ 1985ರಲ್ಲಿ ನಗರಸಭೆಯಿಂದ ಉಚಿತವಾಗಿ ಗುಂಡಿ ತೋಡಿಕೊಡುತ್ತಿದ್ದು, ಇನ್ನು ಮುಂದೆಯೂ ನಗರಪಾಲಿಕೆಯಿಂದ ಉಚಿತವಾಗಿ ಗುಂಡಿ ತೋಡಿಸಿಕೊಡಬೇಕೆಂದು ಆಗ್ರಹಿಸಿ ಮೇಯರ್ ಅಜಯ್ ಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಅವರುಗಳಿಗೆ ಮನವಿ ಸಲ್ಲಿಸಿದರು. ಜಿಲ್ಲಾಡಳಿತಕ್ಕೂ ಮನವಿ ಸಲ್ಲಿಸಲಾಯಿತು.

ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮತ್ತು ಸುತ್ತಮುತ್ತಲಿರುವ ನಿವಾಸಿಗಳಲ್ಲಿ ಯಾರಾದರೂ ಮೃತರಾದರೆ ಮೃತ ದೇಹವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ದಹನ ಮಾಡಬೇಕೆಂದರೆ ಮುಂದುವರೆದ ಈ ಕಾಲದಲ್ಲಿಯೂ ಕಟ್ಟಿಗೆಯನ್ನು ಜೋಡಿಸಿ ಶವ ಸಂಸ್ಕಾರಕ್ಕೆ ಬಂದಿರುವ ಸಂಬಂಧಿಕರು, ಸ್ನೇಹಿತರು ಮತ್ತಿತರೆಯವರ ಎದುರಿನಲ್ಲಿಯೇ ಮೃತದೇಹಕ್ಕೆ ಬೆಂಕಿಯಿಟ್ಟು ಸುಡುವುದನ್ನು ನೋಡಲು ತುಂಬಾ ಬೇಸರವೆನಿಸುತ್ತದೆ. ಅಲ್ಲದೇ, ಪರಿಸರ ಮಾಲಿನ್ಯಕ್ಕೆ ಹಾನಿಯೂ ಕೂಡ.

ಈ ಹಿನ್ನೆಲೆಯಲ್ಲಿ ನಗರವು ಸ್ಮಾರ್ಟ್ ಸಿಟಿಯಾಗಿದ್ದು, ಬೂದಾಳ್ ರಸ್ತೆಯಲ್ಲಿರುವ ಪಾಲಿಕೆಯ ಸ್ಮಶಾನ ಹಾಗೂ ಎಸ್‌ಓಜಿ ಕಾಲೋನಿ ಎಸ್.ಎಸ್. ಆಸ್ಪತ್ರೆ ಬಳಿಯ ಪಾಲಿಕೆ ಸ್ಮಶಾನದಲ್ಲಿ ವಿದ್ಯುತ್ ಚಿತಾಗಾರಗಳನ್ನು ನಿರ್ಮಿಸಿ, ಉಚಿತವಾಗಿ ಮೃತರ ಅಂತ್ಯಕ್ರಿಯೆ ದಹನಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಒತ್ತಾಯಿಸಲಾಯಿತು.

ನಗರ ಪಾಲಿಕೆಯ ವ್ಯಾಪ್ತಿಯು ತುಂಬಾ ವಿಸ್ತಾರವಾಗಿದ್ದು, ದೂರದ ಸ್ಥಳದಿಂದ ಸಂಬಂಧಿಸಿರುವ ಸ್ಮಶಾನಕ್ಕೆ ಮೃತದೇಹಗಳನ್ನು ಸಾಗಿಸಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಮೃತ ದೇಹವನ್ನು ಸಂಬಂಧಿಸಿದ ಸ್ಮಶಾನಕ್ಕೆ ತೆಗೆದುಕೊಂಡು ಹೋಗಲು ಪಾಲಿಕೆಯಿಂದ ಕನಿಷ್ಠ ನಾಲ್ಕು ಶವ ಸಾಗಿಸುವ ಆಂಬ್ಯುಲೆನ್ಸ್ ವಾಹನಗಳನ್ನು ಉಚಿತವಾಗಿ ಒದಗಿಸಲು ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಪಾಲಿಕೆ ವ್ಯಾಪ್ತಿಯಲ್ಲಿ ಶವಗಳನ್ನು ಊಳಲು ಸಂಬಂಧಿಸಿದ ಸ್ಮಶಾನಗಳಲ್ಲಿ ಪಾಲಿಕೆಯಿಂದ ಗುಂಡಿ ತೋಡಿಸಿ ಉಚಿತವಾಗಿ ಮೃತದೇಹದ ಅಂತ್ಯಕ್ರಿಯೆಗೆ ವ್ಯವಸ್ಥೆ ಮಾಡಲು ಸಂಬಂಧಪಟ್ಟ ಶಾಸಕರುಗಳು, ಸಂಸದರು, ಪಾಲಿಕೆ ಸದಸ್ಯರುಗಳು ಈ ಪವಿತ್ರ ಕೆಲಸಗಳನ್ನು ಮಾಡಿಸಲು ಕ್ರಮ ವಹಿಸುವಂತೆ ಪ್ರತಿಭಟನಾಕಾರರು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಕಾರ್ಯದರ್ಶಿ ಹೆಚ್.ಕೆ. ರಾಮಚಂದ್ರಪ್ಪ, ಸಹ ಕಾರ್ಯದರ್ಶಿಗಳಾದ ಆವರಗೆರೆ ಚಂದ್ರು, ಹೆಚ್.ಜಿ. ಉಮೇಶ್, ಖಜಾಂಚಿ ಆನಂದರಾಜ್, ತಾಲ್ಲೂಕು ಕಾರ್ಯದರ್ಶಿ ಆವರಗೆರೆ ವಾಸು, ಸಿ. ರಮೇಶ್, ಐರಣಿ ಚಂದ್ರು, ಕೆ. ಬಾನಪ್ಪ, ಗದ್ದಿಗೇಶ್ ಪಾಳೇದ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಜಿ.ಪಂ ಅಧ್ಯಕ್ಷರಿಗೆ ಖಾಸಗಿ ಶಾಲೆಗಳ ಮನವಿ



ದಾವಣಗೆರೆ,ಆ.25- ಖಾಸಗಿ ಶಾಲೆಗಳು ಅನುಭವಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತಂತೆ ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟವು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ದೀಪಾ ಜಗದೀಶ್ ಅವರಿಗೆ ಮನವಿ ಸಲ್ಲಿಸಿದೆ.

ಜಿಲ್ಲಾ ಪಂಚಾಯ್ತಿ ಕಚೇರಿಯಲ್ಲಿ ದೀಪಾ ಅವರನ್ನು ಇಂದು ಭೇಟಿ ಮಾಡಿದ ಒಕ್ಕೂಟದ ನಿಯೋಗವು, ಪ್ರಸಕ್ತ ಕೋವಿಡ್ 19 ಸಂದರ್ಭದಲ್ಲಿ ಸರ್ಕಾರವು 'ವಿದ್ಯಾಗಮ' ಯೋಜನೆಯನ್ನು ಕೇವಲ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಮಾತ್ರ ಅಳವಡಿಸಿದ್ದು, ಖಾಸಗಿ ಸಂಸ್ಥೆಗಳ ಶಾಲೆಗಳಿಗೆ ಯೋಜನೆಯನ್ನು ಕೊಡದೇ ತಾರತಮ್ಯ ಧೋರಣೆ ಅನುಸರಿಸುತ್ತಿರುವ ಕ್ರಮವನ್ನು ಪ್ರಶ್ನಿಸಿತು.

2019-20ನೇ ಸಾಲಿನ ಆರ್.ಟಿ.ಇ. ಮರುಪಾವತಿ ಜಿಲ್ಲೆಯ ಕೆಲವು ಶಾಲೆಗಳಿಗೆ ಸಂದಾಯವಾಗಿಲ್ಲ. ಖಾಸಗಿ ಶಾಲೆಗಳು ಆನ್ ಲೈನ್ ಶಿಕ್ಷಣವನ್ನು ಕೊಡುತ್ತಿದ್ದು, ತಮ್ಮ ಒಕ್ಕೂಟದ ವತಿಯಿಂದ ಸದಸ್ಯ ಶಾಲೆಗಳು ಯಾವುದೇ ಕಾರಣಕ್ಕೂ ಆರ್.ಟಿ.ಇ. ವಿದ್ಯಾರ್ಥಿಗಳಿಂದ ಆನ್ ಲೈನ್ ಶಿಕ್ಷಣಕ್ಕೆ ಹಣ ಪಡೆಯಬಾರದು ಎಂದು ಸೂಚಿಸಲಾಗಿದೆ ಎಂದು ನಿಯೋಗವು ಜಿ.ಪಂ. ಅಧ್ಯಕ್ಷರಿಗೆ ನೀಡಿರುವ ಮನವಿ ಪತ್ರದಲ್ಲಿ ತಿಳಿಸಿದೆ.

ಈ ವಿಷಯಗಳ ಕುರಿತಂತೆ ತಮ್ಮ ಮನವಿಯನ್ನು ಪುರಸ್ಕರಿಸುವುದರ ಮೂಲಕ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸುವಂತೆ ಒಕ್ಕೂಟದ ಅಧ್ಯಕ್ಷ ಟಿ.ಎಂ. ಉಮಾಪತಯ್ಯ, ಕಾರ್ಯಾಧ್ಯಕ್ಷ ಲಿಂಗರಾಜ್ ಆನೆಕೊಂಡ, ಪ್ರಧಾನ ಕಾರ್ಯದರ್ಶಿ ಸಿ. ಶ್ರೀರಾಮಮೂರ್ತಿ, ಸಹ ಕಾರ್ಯದರ್ಶಿ ಪ್ರಸನ್ನ ಅತ್ತಿಗೆರೆ, ಖಜಾಂಚಿ ವಿಜಯರಾಜ್, ನಿರ್ದೇಶಕರುಗಳಾದ ಶ್ರೀಮತಿ ಸಹನಾ ರವಿ, ಜೆ.ಜೆ. ಮೈನುದ್ದೀನ್, ವಿಜಯಕುಮಾರ್ ಮತ್ತಿತರರು ಜಿ.ಪಂ. ಅಧ್ಯಕ್ಷೆ ದೀಪಾ ಅವರನ್ನು ಕೇಳಿಕೊಂಡಿದ್ದಾರೆ.




## ವರಸಿದ್ಧಿ ಏಕದಂತ ವಿನಾಯಕ ವಿಸರ್ಜನೆ



ದಾವಣಗೆರೆ, ಆ.25- ನಗರದ ದೀಕ್ಷಿತ್ ರಸ್ತೆಯ ಶ್ರೀ ವರಸಿದ್ಧಿ ಏಕದಂತ ವಿನಾಯಕ ದೇವಸ್ಥಾನ ಸಮಿತಿಯಿಂದ 42 ನೇ ವರ್ಷದ ವಿನಾಯಕ ಮಹೋತ್ಸವ ವನ್ನು ಮೂರು ದಿನ ಸರಳವಾಗಿ ಆಚರಿಸಲಾಯಿತು. ದೇವಸ್ಥಾನದ ಎದುರು ಸರಳವಾಗಿ ರೂಪಿಸಿದ ಗಂಗೆಯಲ್ಲಿ ಗಣೇಶನನ್ನು ವಿಸರ್ಜಿಸ ಲಾಯಿತು. ಈ ವೇಳೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಎನ್.ಕೆ.ಸೋಮಶೇಖರಪ್ಪ, ಪ್ರಧಾನ ಕಾರ್ಯದರ್ಶಿ ಕೆ. ಬಿ.ಶಿವಕುಮಾರ್, ಖಜಾಂಚಿ ಡಿ.ಹೆಚ್.ಮೋಹನ್‌ರಾವ್, ಅರ್ಚಕರಾದ ಸಿ.ವಿ. ಜೋಶಿ, ಎಸ್.ವಿ.ರಾಜ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ:

ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327

# ಕಾಡು ಪ್ರಾಣಿಗಳಿಂದ ಬೆಳೆ ಹಾನಿ : ಪರಿಹಾರಕ್ಕೆ ಮನವಿ



ಜಗಳೂರು

ಜಗಳೂರು, ಆ.25- ತಾಲ್ಲೂಕಿನ ರಂಗಯ್ಯನದುರ್ಗ ಅರಣ್ಯ ವಲಯ ವ್ಯಾಪ್ತಿಯಲ್ಲಿ ಬರುವ ಕೆಳಗೋಟೆ,ಕಣಕುಪ್ಪೆ, ಐನಳ್ಳಿ, ಚಿಕ್ಕಬನ್ನಿಹಟ್ಟಿ, ಪೇಟೆ ಬಾಗಿಲು, ಗುಡ್ಡದ ಲಿಂಗಣ್ಣನಹಳ್ಳಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾಗಿದ್ದು, ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ರೈತರು ತಾಲ್ಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕೆಪಿಸಿಸಿ ಎಸ್ಟಿ ಘಟಕದ ರಾಜ್ಯ ಅಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ರಂಗಯ್ಯನದುರ್ಗ ಅರಣ್ಯ ವಲಯ ವ್ಯಾಪ್ತಿಯಲ್ಲಿ ಬರುವ 36 ಕ್ಕೂ ಹೆಚ್ಚು ಗ್ರಾಮಗಳು ಅರಣ್ಯ ಪ್ರದೇಶದ ಅಂಚಿನಲ್ಲಿ ಬರುವುದರಿಂದ ಈ ಭಾಗದ ರೈತರು ಬೆಳೆದ ಬೆಳೆಗಳನ್ನು ಕಾಡು ಪ್ರಾಣಿಗಳ ಹಾವಳಿಯಿಂದ ಹಾನಿಗೀಡಾಗಿ, ರೈತರು ಲಕ್ಷಾಂತರ ರೂಗಳ ಹಾನಿ ಅನುಭವಿಸಿದ್ದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದರು.

ಮೆಕ್ಕೆಜೋಳ, ಶೇಂಗಾ, ಊಟದ ಜೋಳ ಹಾಗು ಇತರೆ ಈ ವರ್ಷದ ಬೆಳೆಗಳು ಒಳ್ಳೆಯ ಸಮೃದ್ಧಿಯಾಗಿ ಬೆಳೆದು ಬಂದಿದ್ದು, ಈಗಾಗಲೇ ಕಾಡು ಪ್ರಾಣಿಗಳಾದ ಹಂದಿ, ಕರಡಿ, ಮುಳ್ಳಂದಿ ಇತರೆ ಪ್ರಾಣಿಗಳು ಸೇರಿದಂತೆ ರೈತರ ಸುಮಾರು 30 ಎಕರೆ ಜಮೀನಿನ ಬೆಳೆಗಳು ಈಗಾಗಲೇ ಸಂಪೂರ್ಣ ನಾಶವಾಗಿದ್ದು, ಈ ಕೂಡಲೇ ಸಂಬಂಧಿಸಿದ ವನ್ಯಜೀವಿ ವಲಯ ಅರಣ್ಯ ಅಧಿಕಾರಿಗಳು ಕ್ರಮ ವಹಿಸಿ ತಡೆಯುವ ಪ್ರಯತ್ನ ಮಾಡಬೇಕು ಎಂದು ಒತ್ತಾಯಿಸಿದರು.

ಕೆಳಗೋಟೆ ಗ್ರಾಮದ ರೈತ ಮುಖಂಡ ಅಮ್ಜದ್ ಅಲಿ ಮಾತನಾಡಿ, ಹಿಂದಿನ ವರ್ಷ 2019ನೇ ಸಾಲಿನ ಬೆಳೆ ಪರಿಹಾರ ಇಲ್ಲಿಯವರೆಗೂ ಯಾವೊಬ್ಬ ರೈತರಿಗೂ ಬೆಳೆ ನಷ್ಟ ಪರಿಹಾರ ತಲುಪಿಲ್ಲ. ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳನ್ನು ಕೇಳಿದರೆ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ವಲಯ ಅರಣ್ಯ ಅಧಿಕಾರಿಗಳಾಗಲೀ, ರಂಗಯ್ಯನದುರ್ಗ ಅರಣ್ಯ ವನ್ಯಜೀವಿ ಅಧಿಕಾರಿಗಳಾಗಲೀ ಕಛೇರಿಯಲ್ಲಿ ಸಿಗುವುದಿಲ್ಲ. ನೇರವಾಗಿ ಭೇಟಿಯಾಗಿ ಮಾತನಾಡಲು ಕಛೇರಿಗೆ ತೆರಳಿದಾಗ ರೈತರಿಗೆ ಯಾವೊಬ್ಬ ಅಧಿಕಾರಿಯೂ ಸ್ಪಂದಿಸುತ್ತಿಲ್ಲ. ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೆಳಗೋಟೆ ಗ್ರಾಮದ ಮಾಜಿ ಅಧ್ಯಕ್ಷ ಅಜ್ಜಯ್ಯ, ಗ್ರಾಮದ ಮುಖಂಡರುಗಳಾದ ಬಸಪ್ಪ, ಶಫಿವುಲ್ಲಾ, ಬಸವರಾಜ್, ನಿಂಗಣ್ಣ. ಕಮಲಮ್ಮ, ಕಲೀಮ್ ಉಲ್ಲಾ, ರತ್ನಮ್ಮ, ಶಿವು, ನಾಗರಾಜ್, ಏಕಾಂತಪ್ಪ ಲಕ್ಷ್ಮಮ್ಮ, ತಿಪ್ಪೇಸ್ವಾಮಿ, ಅಜ್ಜಪ್ಪ, ಗೀತಮ್ಮ, ನಾಗಪ್ಪ, ಶಿವಮೂರ್ತಿ, ಮಹಾಂತೇಶ ಸೇರಿದಂತೆ ವಿವಿಧ ಗ್ರಾಮಗಳ ರೈತರು ಭಾಗವಹಿಸಿದ್ದರು.

## 2,000 ರೂ. ನೋಟುಗಳ ಮುದ್ರಣವಿಲ್ಲ

ಮುಂಬೈ, ಆ. 25 - 2,000 ರೂ. ಮುಖಬೆಲೆಯ ನೋಟುಗಳನ್ನು 2019-20ರಲ್ಲಿ ಮುದ್ರಿಸಿಲ್ಲ. ಕಳೆದ ಕೆಲ ವರ್ಷಗಳಿಂದ ಈ ಮುಖಬೆಲೆಯ ನೋಟುಗಳ ಚಲಾವಣೆ ಕಡಿಮೆಯಾಗಿದೆ ಎಂದು ಆರ್.ಬಿ.ಐ. ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ. ಮಾರ್ಚ್ 2018ರಲ್ಲಿ 33,632 ಲಕ್ಷಗಳಷ್ಟು 2,000 ರೂ. ನೋಟುಗಳು ಚಲಾವಣೆಯಲ್ಲಿದ್ದವು. ಅವುಗಳ ಸಂಖ್ಯೆ ಮಾರ್ಚ್ 2020ರ ವೇಳೆಗೆ 27,398 ಲಕ್ಷಕ್ಕೆ ಕುಸಿತವಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

**ಹುಟ್ಟುಹಬ್ಬದ ಶುಭಾಶಯಗಳು**

ಎಸ್. ಪರಮೇಶ್
ಹಿರಿಯ ನ್ಯಾಯವಾದಿಗಳು
ಮಾಜಿ ಅಧ್ಯಕ್ಷರು
ವಿ.ಎಸ್.ಎಸ್.ಎನ್. ಆವರಗೆರೆ

ಶುಭ ಕೋರುವವರು :
- ಜಿ. ಸುರೇಶ್, ಮಾಜಿ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಮಹಾನಗರ ಪಾಲಿಕೆ, ದಾವಣಗೆರೆ.
- ಜಿ.ಎಂ. ಅಜ್ಜನಗೌಡ, ನಿರ್ದೇಶಕರು, ವಿ.ಎಸ್.ಎಸ್.ಎನ್. ಅವರಗೆರೆ ಹಾಗೂ ಎ.ಜಿ.ಎಂ. ಗ್ರೂಪ್ ಡೆವಲಪರ್
- ಎಲ್.ಎಂ. ಅರುಣ್‌ಕುಮಾರ್, ನಿರ್ದೇಶಕರು, ವಿ.ಎಸ್.ಎಸ್.ಎನ್. ಅವರಗೆರೆ
- ಹರಿಹರದ ತಿಪ್ಪೇಶ್, ನಿರ್ದೇಶಕರು, ವಿ.ಎಸ್.ಎಸ್.ಎನ್. ಅವರಗೆರೆ
- ಎಂ.ಜಿ. ಧನ್ಯಕುಮಾರ್, ಯುವ ಮುಖಂಡರು
- ಬಾತಿ ಕಲ್ಲಪ್ಪ, ಯುವ ಮುಖಂಡರು
- ರಂಗಸ್ವಾಮಿ, ಜೆಡಿಎಸ್ ಮುಖಂಡರು
- ಲೋಕಿಕೆರೆ ಉಮೇಶ್, ಯುವ ಮುಖಂಡರು
- ಚಿಕ್ಕನಹಳ್ಳಿ ಬಾನಪ್ಪ
- ಹೆಚ್.ಎಂ. ರಾಜಶೇಖರ್, ಯುವ ಮುಖಂಡರು
- ರವಿಕುಮಾರ್ ಗಂಗಮಾಳೇರ, ಯುವ ಮುಖಂಡರು
- ವಾಸು ಸಿಪಿಐ ಮುಖಂಡರು
- ರೇವಣಸಿದ್ದಪ್ಪ, ಅಂಬೇಡ್ಕರ್ ಕಾಲೋನಿ, ಆವರಗೆರೆ
- ಜೆಎಂಎಸ್ ಮೈನ್ಸ್ & ಗೋಲ್ಡ್, ಬೆಂಗಳೂರು.
- ಎಸ್.ಕೆ. ಮೈನ್ಸ್ ಗ್ರೂಪ್, ಬೆಂಗಳೂರು.
- ಜೆಎಂಎಸ್ ಗ್ರೂಪ್ಸ್ ಡೆವಲಪರ್ಸ್, ಹೊಸಪೇಟೆ.

ಶ್ರೀ ಆಂಜನೇಯ, ಕರಿಯಮ್ಮ, ಈಶ್ವರ ದೇವಸ್ಥಾನ ಟ್ರಸ್ಟ್ ಆಡಳಿತ ಮಂಡಳಿ, ಆವರಗೆರೆ.

**ಜನ್ಮ ದಿನದ ಹಾರ್ದಿಕ ಶುಭಾಶಯಗಳು**

ಎಸ್. ಪರಮೇಶ್, B.Sc., LLB.,
ಹಿರಿಯ ನ್ಯಾಯವಾದಿಗಳು
S. P. BHOOMIKA LAND DEVELOPER

ಅಧ್ಯಕ್ಷರು : ಜಿಲ್ಲಾ ಬೆಸ್ತರ ಅಭಿವೃದ್ಧಿ ಸಂಘ (ರಿ.),
ಅಧ್ಯಕ್ಷರು : ಬನಶಂಕರಿ ಯುವಕ ಮಂಡಳಿ (ರಿ.)
ಅಧ್ಯಕ್ಷರು : ಬನಶಂಕರಿ ನಗರ ಮತ್ತು ಗ್ರಾಮಾಂತರ ತರಬೇತಿ ಮತ್ತು ಅಭಿವೃದ್ಧಿ ಸಂಸ್ಥೆ (ರಿ.)
ಅಧ್ಯಕ್ಷರು : ಶ್ರೀ ಬನಶಂಕರಿ ಮೀನುಗಾರರ ವಿವಿಧೋದ್ದೇಶ ಸಹಕಾರ ಸಂಘ (ರಿ.)
ಸಂಸ್ಥಾಪಕ ಅಧ್ಯಕ್ಷರು : ದಾವಣಗೆರೆ ತಾಲ್ಲೂಕು ಮೀನು ಮಾರಾಟಗಾರ ಮತ್ತು ಉತ್ಪಾದಕರ ಸಂಸ್ಕರಣ ಸಹಕಾರ ಸಂಘ (ರಿ.)

MANAGING DIRECTOR
- Dynamic Detective and Research Center
- Dynamic Security Force
- S. P. Financier

ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು : S. P. GROUPS

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte